# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:20-05-2025 ರಂದು ಮಂಗಳವಾರ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್, ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಜಗನ್ನಾಥ ಕೆ. ಡಾಂಗೆ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಡಾ. ಕೆ.ಎಲ್. ಅರವಿಂದ. ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಮಧು ಜಿ. ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ಉಲ್ಲಾಸ್ ಇ.ಜಿ. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಶೈಲಜಾ ಸಿದ್ದಪ್ಪ ಹೊಸಳ್ಳೇರ ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 12. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 13. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 14. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 15. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 16. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |
| 17. | ಪ್ರೊ. ಜೆ. ನಾರಾಯಣ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಡಾ. ಕೇಶವ, ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:** ಯಾರು ಇರುವುದಿಲ್ಲ.

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಕುಲಸಚಿವರ ಸಭೆ ಏರ್ಪಡಿಸಿದ್ದು, ಅದರಲ್ಲಿ ಭಾಗವಹಿಸುವುದು ಅನಿವಾರ್ಯವಾಗಿದ್ದರಿಂದ ಸಿಂಡಿಕೇಟ್ ಸಭೆ ತಡವಾಗಿ ಆರಂಭವಾಗಿದ್ದಕ್ಕಾಗಿ ಎಲ್ಲರ ಕ್ಷಮೆಯಾಚಿಸುತ್ತೇನೆ ಎಂದರು. ಮುಂದುವರೆದು ಮಾತನಾಡಿದ ಅವರು, ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನೆಗೆ ಸಂಬಂಧಪಟ್ಟ ಬಹಳಷ್ಟು ವಿಷಯಗಳು ಚರ್ಚೆ ಮತ್ತು ನಿರ್ಣಯಕ್ಕೆ ಇವೆ. ಆದುದರಿಂದ ಉತ್ತಮ ಚರ್ಚೆ ನಡೆಸಿ ನಿರ್ಣಯ ಕೈಗೊಳ್ಳೋಣ ಎಂದರು.

21/6/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

## ಪ್ರಾಧಿಕಾರ ವಿಭಾಗ

**2025–ಸಿಂ–4.01:** ದಿನಾಂಕ:07–03–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ಡಾ.ಜಿ. ಮಧು ರವರು ಮಾತನಾಡಿ, ದಿನಾಂಕ:07–03–2025 ರ ಸಭೆಯ ವಿಷಯ ಸಂಖ್ಯೆ:2025–ಸಿಂ–2.21 ರಲ್ಲಿ ಪ್ರತಿ ವರ್ಷ ಜೂನ್ 29ರಂದು 'ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನ'ವನ್ನು ಆಚರಿಸಬೇಕು ಮತ್ತು ವಿಶ್ವವಿದ್ಯಾಲಯದ ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ವರ್ಗದವರು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳ ವಿಶೇಷ ಸಾಧನೆಗಳನ್ನು ಗುರುತಿಸಿ ಗೌರವಿಸಲು, ಉತ್ತಮ ಸಾಧನೆ ಮಾಡಿದ ಸಂಯೋಜಿತ/ಘಟಕ ಕಾಲೇಜನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಬೇಕು ಮತ್ತು ಆಯಾ ವರ್ಷದಲ್ಲಿ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಸಾಧನೆ, ಸಂಶೋಧನೆ ಮುಂತಾದ ಅಂಶಗಳನ್ನು ಒಳಗೊಂಡ ವಸ್ತುಪ್ರದರ್ಶನ ಏರ್ಪಡಿಸುವುದರ ಮೂಲಕ 'ಸ್ಥಾಪನಾ ದಿನ'ವನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಬೇಕೆಂದು ನಿರ್ಣಯಿಸಲಾಗಿದೆ. ಆದುದರಿಂದ, ಇದಕ್ಕೆ ಈಗಲೇ ಸಿದ್ಧತೆಗಳನ್ನು ಆರಂಭಿಸಿ, ಅರ್ಹರು ಹಾಗೂ ಕಾಲೇಜುಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಆರಂಭಿಸಬೇಕು ಎಂದರು. ಪ್ರೊ. ಗೋಪಿನಾಥ್ ರವರು ಮಾತನಾಡಿ ಇದೇ ಸಂದರ್ಭದಲ್ಲಿ ಅತ್ಯುತ್ತಮ ಹಿರಿಯ ವಿದ್ಯಾರ್ಥಿ (Notable Alumni) ಯನ್ನು ಆಯ್ಕೆ ಮಾಡಿ ಗೌರವಿಸಬೇಕು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಈ ಹಿಂದೆ ಮೈಸೂರು ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ವಸ್ತುಪ್ರದರ್ಶನ ಏರ್ಪಡಿಸುತ್ತಿದ್ದರು. ಒಂದು ದಿನ ವಿಶ್ವವಿದ್ಯಾಲಯವನ್ನು ಸಾರ್ವಜನಿಕರಿಗೆ ತೆರೆದು, ಸಾರ್ವಜನಿಕರು ವೀಕ್ಷಿಸಲು ಅವಕಾಶ ಮಾಡಿಕೊಡಬಹುದು ಎಂದರು. ಡಾ. ಕೆ.ಎಲ್.ಅರವಿಂದ ರವರು ಮಾತನಾಡಿ, ಕೆಲವು ವಿಶ್ವವಿದ್ಯಾಲಯಗಳಲ್ಲಿ 'University Open Day' ಎಂದು ಇರುತ್ತದೆ. ನಮ್ಮಲ್ಲಿ ಕೂಡ ಒಂದೆರೆಡು ದಿನಗಳ ಕಾಲ 'University Open Day' ಎಂಬುದನ್ನು ಮಾಡಬಹುದು ಎಂದರು. ಶ್ರೀ ಮುಸಾವೀರ್ ಬಾಷಾ ಮತ್ತು ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿರುವ ವಿವಿಧ ಅಧ್ಯಯನ ಪೀಠ ಹಾಗೂ ಅಧ್ಯಯನ ಕೇಂದ್ರಗಳ ಕಾರ್ಯಚಟುವಟಿಕೆಗಳು ಮತ್ತು ಪೀಠ/ಕೇಂದ್ರ ಹೊಂದಿರುವ ಹೆಸರಿನ ಗಣ್ಯರ ವ್ಯಕ್ತಿ ಮತ್ತು ವ್ಯಕ್ತಿತ್ವದ ಕುರಿತು ಪ್ರದರ್ಶನ ಏರ್ಪಡಿಸಬಹುದು ಎಂದರು. ಉತ್ತಮ ಕಾಲೇಜು ಎಂಬುದನ್ನು ಆಯ್ಕೆ ಮಾಡುವುದು ಕಷ್ಟ. ಆದುದರಿಂದ ಉತ್ತಮ ಕಾಲೇಜು ಎಂದು ಆಯ್ಕೆ ಮಾಡುವುದನ್ನು ಕೈಬಿಡುವುದು ಒಳ್ಳೆಯದು ಎಂದು ಸಭೆಯಲ್ಲಿ ಚರ್ಚೆಯಾಯಿತು.

ಸದಸ್ಯರಾದ ಶ್ರೀ ಶಿವಕುಮಾರ್ ರವರು ಮಾತನಾಡಿ, ಡಾ.ಅನುರಾಧ ಪಟೇಲ್ ರವರ ಸ್ವಯಂನಿವೃತ್ತಿ ಕುರಿತು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು. ಈವರೆಗೆ ಏನು ಕ್ರಮ ಆಗಿದೆ ಎಂದರು. ಕುಲಸಚಿವರು ಮಾತನಾಡಿ, ಅವರ ವೇತನ ಭತ್ಯೆಗಳ ಪಾವತಿ ಕುರಿತು ಸೇವಾ ಪರಿಣಿತರ ಅಭಿಪ್ರಾಯ ಕೋರಿ ಪತ್ರ ಬರೆಯಲಾಗಿದೆ. ಅಭಿಪ್ರಾಯ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದರು.

ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ವಿಶ್ವವಿದ್ಯಾಲಯದ ಅಭಿವೃದ್ಧಿಯ ದೃಷ್ಟಿಯಿಂದ ಸಿಂಡಿಕೇಟ್ ಸಭೆಯಲ್ಲಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ. ಆದರೆ ನಿರ್ಣಯಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಸಭೆಯಲ್ಲಿ ಚರ್ಚಿಸಿದವರೇ ಬೇರೆಯಾಗಿದ್ದು, ನಡಾವಳಿಗಳಲ್ಲಿ ದಾಖಲಾಗಿರುವ ಸದಸ್ಯರ ಹೆಸರುಗಳು ಬೇರೆಯಾಗಿರುತ್ತವೆ. ಸಭೆಯ ಅಜೆಂಡಾಗಳನ್ನು ಸಾಕಷ್ಟು ಮುಂಚಿತವಾಗಿ ಸದಸ್ಯರಿಗೆ ಕಳುಹಿಸಬೇಕು. ಕನಿಷ್ಟ ವಾಟ್ಸಾಪ್ ಮೂಲಕವಾದರೂ ಕಳುಹಿಸಿದಲ್ಲಿ, ಅಧ್ಯಯನ ಮಾಡಿಕೊಂಡು ಬಂದು ಆರೋಗ್ಯಕರ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಚರ್ಚೆನಡೆಸಲು ಸಾಧ್ಯವಾಗುತ್ತದೆ. ಸಿಂಡಿಕೇಟ್ ಸಭೆಯ ನಿರ್ಣಯಗಳು ನಮಗೆ ವಿಶ್ವವಿದ್ಯಾಲಯದಿಂದ ಅಧಿಕೃತವಾಗಿ ಬರುವ ಮೊದಲೇ ವಾಟ್ಸಾಪ್‌ನಲ್ಲಿ ಬಂದಿರುತ್ತವೆ ಎಂದರು.

ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಸಭೆಯ ನಿರ್ಣಯಗಳು ಅಧಿಕೃತವಾಗಿ ನಡಾವಳಿ ಪ್ರಕಟವಾಗುವುದಕ್ಕೆ ಮುನ್ನವೇ ಸದಸ್ಯರಿಗೆ ವಾಟ್ಸಾಪ್ ಮೂಲಕ ಕಳುಹಿಸುವುದು ಉತ್ತಮ ಬೆಳವಣಿಗೆಯಲ್ಲ. ಹೀಗೆ ತಮಗೆ ಬಂದಿದ್ದರೆ ಈ ಬಗ್ಗೆ ಮಾಹಿತಿ ನೀಡಿದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನಿನ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು. ಮುಂದುವರೆದು ಮಾತನಾಡಿದ ಅವರು, ಸಭಾ ನಡಾವಳಿಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದೀರಿ. ಇನ್ನು ಮುಂದೆ ಸಿಂಡಿಕೇಟ್ ಸಭೆಯ ನಡಾವಳಿಗಳ ಕರಡು ಪ್ರತಿಯನ್ನು ಸದಸ್ಯರಿಗೆ ತಲುಪಿಸಲಾಗುವುದು. ಸಭೆಯಲ್ಲಿ ಚರ್ಚಿತವಾಗಿರುವುದಕ್ಕೂ ಮತ್ತು ಸಭಾ ನಡಾವಳಿಯಲ್ಲಿ ದಾಖಲಾಗಿರುವುದಕ್ಕೂ ವ್ಯತ್ಯಾಸವಿದ್ದಲ್ಲಿ, ಆಗಬೇಕಾಗಿರುವ ಬದಲಾವಣೆಗಳ ಬಗ್ಗೆ 7 ದಿನಗಳೊಳಗೆ ಲಿಖಿತವಾಗಿ ತಿಳಿಸಿದಲ್ಲಿ ಅಂತಿಮಗೊಳಿಸಿ ನಂತರ ಪ್ರಕಟಿಸಲಾಗುವುದು. 7 ದಿನಗಳ ಒಳಗೆ ಯಾವುದೇ ಮನವಿ ಬಾರದಿದ್ದಲ್ಲಿ ಅಂತಿಮಗೊಳಿಸಿ ಪ್ರಕಟಿಸಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ, ವಿಷಯ ಸಂಖ್ಯೆ:2025–ಸಿಂ–2.01ಗೆ ಸಂಬಂಧಪಟ್ಟಂತೆ, ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಎಲ್.ಎಂ.ಎಸ್. ಸಾಫ್ಟ್‌ವೇರ್ ಅನುಷ್ಠಾನ ಮೂಲಕ ಈವರೆಗೆ ಪ್ರವೇಶ ನೀಡಿರುವುದು, ಅಧ್ಯಯನ ಸಾಮಗ್ರಿಗಳ ಸರಬರಾಜು, ಸಂಪರ್ಕ ತರಗತಿಗಳನ್ನು ನಡೆಸಿರುವುದು ಸೇರಿದಂತೆ ಈಗಾಗಲೇ ಪಾವತಿಸಿರುವ ಹಣಕ್ಕೆ ಎಷ್ಟು ಕೆಲಸ ಮಾಡಿದ್ದಾರೆ. ಮುಂದೆ ಆಗಬೇಕಾಗಿರುವ ಕಾರ್ಯಗಳೇನು? ಎಂಬುದನ್ನು ಸಮಗ್ರವಾಗಿ ಪರಿಶೀಲಿಸುವ ಸಲುವಾಗಿ ರಚಿಸಿರುವ ಸಮಿತಿಗೆ ಸಿಂಡಿಕೇಟ್ ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರನ್ನು ಸೇರ್ಪಡೆ ಮಾಡಲು ನಿರ್ಣಯಿಸಿತು. ಮುಂದುವರೆದು, ಮೇಲೆ ಚರ್ಚಿಸಿರುವ ಕಾರ್ಯಚಟುವಟಿಕೆಗಳ ಜೊತೆಗೆ ವಿಶ್ವವಿದ್ಯಾಲಯದ ಸಾಧನೆಗಳನ್ನು ಪ್ರತಿಬಿಂಬಿಸುವ ಚಿತ್ರ ಪ್ರದರ್ಶನ, ಪುಸ್ತಕ ಪ್ರಕಾಶಕರಿಂದ ಮಳಿಗೆ ತೆರೆದು ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವುದರೊಂದಿಗೆ ಪಠ್ಯೇತರ ಚಟುವಟಿಕೆ ಸಂಚಾಲಕರಾದ ಪ್ರೊ. ನೆಲ್ಲಿಕಟ್ಟೆ ಸಿದ್ದೇಶ್ ರವರನ್ನು ಸಭೆಗೆ ಆಹ್ವಾನಿಸಿ 'ವಿಶ್ವವಿದ್ಯಾಲಯದ ಸ್ಥಾಪನಾ ದಿನ'ದಲ್ಲಿ ಏರ್ಪಡಿಸಬೇಕಾದ ಸ್ತಬ್ಧ ಚಿತ್ರ ಹಾಗೂ ರೂಪುರೇಷೆ ಬಗ್ಗೆ ನಿರ್ದೇಶನ ನೀಡಲಾಯಿತು. ಅದರಂತೆ ಜೂನ್ 29 ರಂದು 'ವಿಶ್ವವಿದ್ಯಾಲಯ ಸ್ಥಾಪನಾ ದಿನ'ವನ್ನು ಆಚರಿಸಲು ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಿದ ಸಭೆಯು ಉಳಿದಂತೆ ದಿನಾಂಕ:07–03–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಿತು.

**2025–ಸಿಂ–4.02:** ದಿನಾಂಕ:07–03–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:07–03–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಪರಾಮರ್ಶಿಸಿ ಅನುಮೋದಿಸಿತು.

**2025–ಸಿಂ–4.03:** 35ನೇ ಘಟಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಈ ಕೆಳಕಂಡ ಗಣ್ಯರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

23/6/25

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

01. ಶ್ರೀಮತಿ ಮೀರಾ ಕುಮಾರಿ, ಶ್ರೀ ಬಾಬು ಜಗಜೀವನ್‌ರಾಂ ರವರ ಪುತ್ರಿ ಹಾಗೂ ಲೋಕಸಭೆಯ ಮಾಜಿ ಸ್ಪೀಕರ್
02. ಜಸ್ಟೀಸ್ ಶ್ರೀ ಎಲ್. ನಾರಾಯಣ ಸ್ವಾಮಿ, ಕರ್ನಾಟಕ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಪ್ರಸ್ತುತ, ಲೋಕ್‌ಪಾಲ್ ಆಫ್ ಇಂಡಿಯಾದ ಸದಸ್ಯರು .
03. ಜಸ್ಟೀಸ್ ಶ್ರೀ ಹೆಚ್.ಎನ್. ನಾಗಮೋಹನದಾಸ್
04. ಪ್ರೊ. ರವಿವರ್ಮಕುಮಾರ್
05. ಅಧ್ಯಕ್ಷರು, ವಿಶ್ವವಿದ್ಯಾಲಯ ಧನ ಸಹಾಯ ಆಯೋಗ
06. ಶ್ರೀ ಎನ್.ಆರ್. ನಾರಾಯಣಮೂರ್ತಿ, ಸಂಸ್ಥಾಪಕರು, ಇನ್ಫೋಸಿಸ್, ಬೆಂಗಳೂರು
07. ಜಸ್ಟೀಸ್ ಹೆಚ್. ಪಿ. ಸಂದೇಶ್
08. ಡಾ. ವಿ. ನಾರಾಯಣ, ಅಧ್ಯಕ್ಷರು, ಇಸ್ರೋ

**ಹಣಕಾಸು ವಿಭಾಗ**

**2025–ಸಿಂ–4.04:** 2024–25ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ: 19–03–2025 ರಂದು ನಡೆದ ವಿಶ್ವವಿದ್ಯಾಲಯದ 2024–25ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಪರಾಮರ್ಶಿಸಿ ಅನುಮೋದಿಸಲಾಯಿತು.

**ಎಸ್ಟೇಟ್ ವಿಭಾಗ**

**2025–ಸಿಂ–4.05:** ವಿಜ್ಞಾನ ಕೇಂದ್ರ ಕೆಟಗರಿ–2 ಸ್ಥಾಪನೆಗೆ ಸಹ್ಯಾದ್ರಿ ಕಾಲೇಜ್ ಆವರಣದ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ – ಬೆಂಗಳೂರು ಇವರಿಗೆ 7 ಎಕರೆ ಜಮೀನನ್ನು ಹಸ್ತಾಂತರಿಸಿರುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ, ಕರ್ನಾಟಕ ಸರ್ಕಾರವು ಶಿವಮೊಗ್ಗದಲ್ಲಿ ವಿಜ್ಞಾನ ಕೇಂದ್ರ ಕೆಟಗರಿ–2 ಸ್ಥಾಪನೆ ಮಾಡಲು ಸಹ್ಯಾದ್ರಿ ಕಾಲೇಜ್ ಆವರಣದ 7 ಎಕರೆ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು ಇವರಿಗೆ ನೀಡುವ ಬಗ್ಗೆ ಈ ಹಿಂದೆ ಸರ್ಕಾರದಿಂದ ಪ್ರಸ್ತಾವನೆ ಬಂದಿದೆ. ವಿಶ್ವವಿದ್ಯಾಲಯವು ದಿನಾಂಕ:28–02–2022 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು, 7 ಎಕರೆ ಜಾಗ ನೀಡಲು ಸರ್ಕಾರಕ್ಕೆ ಅನುಮತಿ ಪತ್ರ ನೀಡಲಾಗಿದೆ. ಸರ್ಕಾರವು ಈ ಕುರಿತು ಆದೇಶ ಹೊರಡಿಸಿದ್ದು, ಅದರ ಪ್ರಕಾರ ಕಾಮಗಾರಿ ನಡೆಯುತ್ತಿದೆ. ಜಾಗ ವಶಕ್ಕೆ ಪಡೆದಿರುವ ಸರ್ಕಾರದ ಆದೇಶವನ್ನು ಸರ್ಕಾರವೇ ಹಿಂಪಡೆಯಬೇಕಾಗುತ್ತದೆ ಎಂದರು. ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ಇದರ ಬಗ್ಗೆ ಎಲ್ಲಾ ಸಿಂಡಿಕೇಟ್ ಸಭೆಗಳಲ್ಲೂ ಚರ್ಚೆಯಾಗುತ್ತಿದೆ. ಆದಾಗ್ಯೂ ಅವರು ಪೂರ್ಣ ಜಾಗಕ್ಕೆ ಕಾಂಪೌಂಡ್ ನಿರ್ಮಿಸಿದ್ದಾರೆ. ಸಹ್ಯಾದ್ರಿ ಕಾಲೇಜಿನ ಶೈಕ್ಷಣಿಕ, ಸಂಶೋಧನೆ ಮತ್ತು ಪಠ್ಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಸದರಿ ಜಾಗದ ಅಗತ್ಯವಿದೆ. ಇಂತಹ ಜಾಗ ಮತ್ತೆ ವಿಶ್ವವಿದ್ಯಾಲಯಕ್ಕೆ ದೊರಕುವುದು ಅಸಾಧ್ಯ. ಈಗಾಗಲೇ ಆಯನೂರಿನಲ್ಲಿ ಸೈನ್ಸ್ ಪಾರ್ಕ್ ಇದೆ. ಆದುದರಿಂದ ಸಹ್ಯಾದ್ರಿ ಕಾಲೇಜಿನ ಜಾಗವನ್ನು ಉಳಿಸಿಕೊಳ್ಳುವ ಅಗತ್ಯವಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ನಿರ್ಣಯ: ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು, ವಿಜ್ಞಾನ ಕೇಂದ್ರ ಕೆಟಗರಿ-2 ಸ್ಥಾಪನೆ ನಿರ್ಮಾಣಕ್ಕಾಗಿ ಸಹ್ಯಾದ್ರಿ ಕಾಲೇಜಿನ 7 ಎಕರೆ ಜಾಗವನ್ನು ಸರ್ಕಾರಕ್ಕೆ ನೀಡಲು ಅನುಮತಿಸಿರುವ ದಿನಾಂಕ:28-02-2022ರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಹಿಂಪಡೆಯಲು ಮತ್ತೊಮ್ಮೆ ನಿರ್ಣಯಿಸಿದ ಸಭೆಯು, ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ, ಸಂಶೋಧನೆ ಮತ್ತು ಪಠ್ಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಜಾಗದ ಅಗತ್ಯವಿರುವುದರಿಂದ ಹಾಗೂ ಕಾಲೇಜಿನ ಭವಿಷ್ಯದ ಬೆಳವಣಿಗೆಗೆ ಬೇರಾವುದೇ ಜಾಗ ಲಭ್ಯವಿಲ್ಲವಾದ್ದರಿಂದ ವಿಜ್ಞಾನ ಕೇಂದ್ರ ಕೆಟಗರಿ-2 ಸ್ಥಾಪನೆ ನಿರ್ಮಾಣಕ್ಕಾಗಿ 7 ಎಕರೆ ಜಾಗವನ್ನು ಸರ್ಕಾರ ಹಸ್ತಾಂತರ ಮಾಡಿಕೊಂಡಿರುವ ಆದೇಶವನ್ನು ರದ್ದುಪಡಿಸಿ, ಕಾಲೇಜಿಗೆ ಹಿಂದಿರುಗಿಸುವಂತೆ ಸರ್ಕಾರಕ್ಕೆ ಮನವಿ ಹಾಗೂ ಪ್ರಸ್ತಾವನೆ ಸಲ್ಲಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2025-ಸಿಂ-4.06:** ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ಗುತ್ತಿಗೆ ಆಧಾರದ ಮೇಲೆ ಕ್ಯಾಂಟೀನ್ ನಡೆಸಲು ಪ್ರತಿಷ್ಠಿತ ಸೇವಾ ಪೂರೈಕೆದಾರರಿಗೆ (E-Tender for Running of Canteen in the University Campus on Contract Basis) ಗುತ್ತಿಗೆ ನೀಡುವ ಸಲುವಾಗಿ ಅಲ್ಪಾವಧಿಯ ಇ-ಟೆಂಡರ್ ಮೂಲಕ ಕ್ರಮಕೈಗೊಂಡಿರುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಮುಚ್ಛಯ ಕಟ್ಟಡದಲ್ಲಿರುವ ಕ್ಯಾಂಟೀನ್‌ನ ಗುತ್ತಿಗೆ ಅವಧಿ ಮುಗಿದಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಪೋಷಕರು, ಸಿಬ್ಬಂದಿಗಳು ಹಾಗೂ ವಿವಿಧ ಕೆಲಸ ಕಾರ್ಯಗಳಿಗಾಗಿ ಆಗಮಿಸುವವರಿಗೆ ಊಟ ಮತ್ತು ಉಪಹಾರದ ಸೇವೆಯನ್ನು ಒದಗಿಸುವ ಸಲುವಾಗಿ ಕ್ಯಾಂಟೀನ್ ನಿರ್ವಹಣೆ ಸೇವೆ ಒದಗಿಸುವವರನ್ನು ಆಯ್ಕೆಮಾಡುವ ಉದ್ದೇಶದಿಂದ ಇ-ಟೆಂಡರ್ ಪ್ರಕ್ರಿಯೆ ನಡೆಸಲಾಗಿದ್ದು, ಟೆಂಡರ್‌ನ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್‌ನಲ್ಲಿ ಯಶಸ್ವಿಯಾಗಿರುವ ಮೆ:ಹೊಯ್ಸಳ ಫುಡ್ ಕೋರ್ಟ್, ತುಮಕೂರು ಇವರಿಗೆ ರೂ.12,700/- (ಹನ್ನೆರಡು ಸಾವಿರದ ಏಳುನೂರು ರೂಪಾಯಿಗಳು ಮಾತ್ರ)ಗಳ ಮಾಸಿಕ ಬಾಡಿಗೆ ಆಧಾರದಲ್ಲಿ ಹಾಗೂ ವಿಶ್ವವಿದ್ಯಾಲಯದ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕ್ಯಾಂಟೀನ್ ಸೇವೆಯನ್ನು ಒದಗಿಸುವ ಇ-ಟೆಂಡರ್ ಪ್ರಕ್ರಿಯೆನ್ನು ಸಭೆಯು ಅನುಮೋದಿಸಿತು.

**2025-ಸಿಂ-4.06(ಎ):** ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ/ತೋಟಗಾರಿಕೆ/ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು M/s KSF-9 Corporate Service Pvt. Ltd., Bengaluru ಇವರಿಂದ ಪಡೆಯುತ್ತಿರುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ/ತೋಟಗಾರಿಕೆಗಾಗಿ ಗಾರ್ಡನರ್ಸ್/ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಿರುವ ಮೆ॥ ಕೆಎಸ್‌ಎಫ್-9, ಬೆಂಗಳೂರು ಈ ಸಂಸ್ಥೆಯ ಕಾರ್ಯಾವಧಿಯು ದಿನಾಂಕ:22-06-2023 ರಂದು ಮುಕ್ತಾಯಗೊಂಡಿದ್ದು, ದಿನಾಂಕ: 16-06-2023 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಕರ್ನಾಟಕ ಸರ್ಕಾರದ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಪ್ರಕ್ರಿಯೆ ಕೈಗೊಂಡು, ಸದರಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಪ್ರಸ್ತುತ ಹೊರಗುತ್ತಿಗೆ ಸೇವೆ ಒದಗಿಸುತ್ತಿರುವ ಮೆ॥ ಕೆ.ಎಸ್.ಎಫ್-9,ಕಾರ್ಪೊರೇಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯ ಕಾರ್ಯಾವಧಿಯನ್ನು ವಿಸ್ತರಿಸಲಾಗಿರುತ್ತದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಪ್ರಸ್ತುತ, ವಿಶ್ವವಿದ್ಯಾಲಯದಲ್ಲಿ ಖಾಯಂ ಅಧ್ಯಾಪಕೇತರ ನೌಕರರುಗಳ ಕೊರತೆ ಇರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಕ್ಕೆ ಭದ್ರತಾ/ತೋಟಗಾರಿಕೆ/ಸ್ವಚ್ಛತೆ/ಗ್ಯಾಂಗ್‌ಮನ್ ಮುಂತಾದ ಕೆಲಸಗಳ ನಿರ್ವಹಣೆಗಾಗಿ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ 02 ವರ್ಷಗಳ ಅವಧಿಗೆ ಒದಗಿಸಲು ಕೆ.ಟಿ.ಪಿ.ಪಿ., ಕಾಯ್ದೆ–1999ರ ನಿಯಮ 2000ರನ್ವಯ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನ ದರಗಳಂತೆ, ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ:15-01-2025 ರಂದು ಟೆಂಡರ್ ಆಹ್ವಾನಿಸಲಾಗಿತ್ತು. ವಿಶ್ವವಿದ್ಯಾಲಯದ ಪ್ರಕಟಣೆಗೆ ಅನುಗುಣವಾಗಿ ಇ-ಟೆಂಡರ್ ಮೂಲಕ 06 ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದವು. ಸದರಿ 06 ಸಂಸ್ಥೆಗಳು ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸಿದ್ದ ದಾಖಲಾತಿಗಳನ್ನು ವಿಶ್ವವಿದ್ಯಾಲಯವು ರಚಿಸಿದ್ದ ಟೆಂಡರ್ ಪರಿಶೀಲನಾ ಸಮಿತಿಯು ಟೆಂಡರ್ ಅರ್ಜಿಯಲ್ಲಿನ ಷರತ್ತುಗಳಂತೆ ಅರ್ಜಿದಾರರು ಸಲ್ಲಿಸಿದ್ದ ದಾಖಲಾತಿಗಳನ್ನು ಪರಿಶೀಲಿಸಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ಮತ್ತು ಹಣಕಾಸು ಬಿಡ್‌ನಲ್ಲಿ ನಿಗದಿಪಡಿಸಿದ ಮಾನದಂಡಗಳು ಹಾಗೂ ಅಂಕಗಳನ್ವಯ ಮೌಲ್ಯಮಾಪನ ಮಾಡಿದ್ದು, ಸದರಿ ಬಿಡ್‌ದಾರರು ಗಳಿಸಿರುವ ಅಂಕಗಳನ್ನು ಮತ್ತು ಹಣಕಾಸು ಬಿಡ್‌ನಲ್ಲಿನ ಕನಿಷ್ಠ ದರಗಳನ್ನು ಪರಿಗಣಿಸಿ, M/s KSF-9 Corporate Service Pvt. Ltd., Bengaluru ಈ ಸಂಸ್ಥೆಯವರು ಎಲ್–1 ಆಗಿರುತ್ತಾರೆ ಎಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ, M/s KSF-9 Corporate Service, ಬೆಂಗಳೂರು ಸಂಸ್ಥೆಯವರು ಸಕಾಲದಲ್ಲಿ ವೇತನ ಪಾವತಿಸುತ್ತಿಲ್ಲವೆಂದು ದೂರುಗಳಿವೆ. ಅಲ್ಲದೇ ರಾಜೀವ್‌ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯದವರು ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿದ್ದಾರೆಂಬ ಮಾಹಿತಿ ಇದೆ. ಆದುದರಿಂದ ಸದರಿ ಸಂಸ್ಥೆಗೆ ಮತ್ತೊಮ್ಮೆ ಟೆಂಡರ್ ನೀಡುವುದು ಬೇಡ ಎಂದರು. ಶ್ರೀ ಶಾಂತಕುಮಾರ್ ರವರು ಮಾತನಾಡಿ, 2 ವರ್ಷಗಳ ಹಿಂದೆ, ವಿಶ್ವವಿದ್ಯಾಲಯಕ್ಕೆ ಸೇವೆ ಒದಗಿಸಲು ಸಾಧ್ಯವಿಲ್ಲವೆಂದು ಹಿಂದೆ ಸರಿದಿದ್ದರು. ಈಗ ಮತ್ತೆ ಹೇಗೆ ಟೆಂಡರ್ ಸಲ್ಲಿಸಿ ಬಂದಿದ್ದಾರೆ ಎಂದರು. ಶ್ರೀ ಶಶಿಧರ್ ಬಿ.ಎನ್. ರವರು ಮಾತನಾಡಿ, ಸದರಿ ಸಂಸ್ಥೆಯ ವಿರುದ್ಧ ಬಹಳಷ್ಟು ದೂರುಗಳು ಬಂದಿವೆ, ಆದುದರಿಂದ, ಇನ್ನೊಮ್ಮೆ ಪರಿಶೀಲಿಸಿ ಎಂದರು. ಡಾ.ಜಗನ್ನಾಥ ಡಾಂಗೆ ರವರು ಮಾತನಾಡಿ, ಕೆ.ಟಿ.ಪಿ.ಪಿ. ನಿಯಮಗಳ ಪ್ರಕಾರ ಅವರು ಟೆಂಡರ್ ಸಲ್ಲಿಸಿದ್ದಾರೆ ಮತ್ತು ಅರ್ಹರಾಗಿ ಆಯ್ಕೆಯಾಗಿದ್ದಾರೆ. ಈಗ ಎಲ್ಲಾ ಪ್ರಕ್ರಿಯೆಗಳು ಮುಗಿದಿವೆ. ಟೆಂಡರ್ ಪರಿಶೀಲನಾ ಸಮಿತಿಯು ಪೂರ್ಣವಾಗಿ ಎಲ್ಲವನ್ನೂ ಪರಿಶೀಲಿಸಬೇಕಾಗಿತ್ತು. ಈ ಹಂತದಲ್ಲಿ ಆಗುವುದಿಲ್ಲ ಎನ್ನುವುದು ಸರಿಯಲ್ಲ. ಇದರಿಂದ ಕಾನೂನು ತೊಡಕುಗಳು ಉಂಟಾಗಬಹುದು ಎಂದರು. ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, M/s KSF-9 Corporate Service, ಬೆಂಗಳೂರು ಸಂಸ್ಥೆಯವರನ್ನು ಯಾರೂ ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿಲ್ಲವೆಂದು ಅವರು ಅಫಿಡವಿಟ್ ಕೊಟ್ಟಿದ್ದಾರೆ. ಬ್ಲಾಕ್‌ಲಿಸ್ಟ್‌ನಲ್ಲಿ ಇಟ್ಟಿರುವುದಾಗಿ ತಿಳಿಸುತ್ತಿರುವವರು ದಾಖಲೆಗಳನ್ನು ಕೊಡಲಿ. ಬ್ಲಾಕ್‌ಲಿಸ್ಟ್‌ನಲ್ಲಿ ಇಟ್ಟಿರುವುದು ಸಾಬೀತಾದರೆ ಅವರ ಮೇಲೆ ಎಫ್.ಐ.ಆರ್. ಹಾಕಬಹುದು ಎಂದರು. ಶ್ರೀ ಶಿವಕುಮಾರ್ ರವರು ಮಾತನಾಡಿ, ದೂರುಗಳಿರುವುದರಿಂದ ಈ ವಿಷಯವನ್ನು ಮುಂದೂಡಬಹುದು ಎಂದರು. ಕುಲಸಚಿವರು ಮಾತನಾಡಿ, ಪ್ರಸ್ತುತ ಅವರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಟೆಂಡರ್ ದಾಖಲೆಗಳ ಜೊತೆಗೆ ಸದರಿ ಸಂಸ್ಥೆಯವರನ್ನು ಯಾರೂ ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿಲ್ಲ ಎಂದು ಅಫಿಡವಿಟ್ ಕೊಟ್ಟಿದ್ದಾರೆ. ಬ್ಲಾಕ್ ಲಿಸ್ಟ್‌ನಲ್ಲಿ ಇರುವ ಬಗ್ಗೆ ದಾಖಲೆ ನೀಡಿದಲ್ಲಿ ಪರಿಶೀಲಿಸಲಾಗುವುದು. ಹೊಸ ಟೆಂಡರ್ ಆಗದಿರುವ ಬಗ್ಗೆ ಆಡಿಟ್‌ನಲ್ಲಿ ಕೂಡ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಆಕ್ಷೇಪಣೆಯಾಗಿದೆ. ಅಲ್ಲದೇ, ದಿನಾಂಕ:01-06-2025 ರಿಂದ ಹೊಸದಾಗಿ ಟೆಂಡರ್ ಪಡೆದಿರುವವರು ಕರಾರು ಒಪ್ಪಂದ ಮಾಡಿಕೊಂಡು ಸೇವೆ ಆರಂಭಿಸಬೇಕು. ಆದುದರಿಂದ, ಇದನ್ನು ಈ ಹಂತದಲ್ಲಿ ಮುಂದಿನ ಸಭೆಗೆ ಮುಂದೂಡಿದರೆ ತಾಂತ್ರಿಕವಾಗಿ ಸಮಸ್ಯೆಗಳಾಗುತ್ತದೆ. ಜೂನ್ 1 ರಿಂದ ಸದರಿ ಸೇವೆ ಸ್ಥಗಿತಗೊಳಿಸಲು ಸಾಧ್ಯವಿಲ್ಲ ಎಂದರು. ಶ್ರೀ ಕೆ.ಪಿ. ಶ್ರೀಪಾಲ್ ರವರು ಮುಂದುವರೆದು ಮಾತನಾಡಿ, ಬ್ಲಾಕ್ ಲಿಸ್ಟ್‌ನಲ್ಲಿ ಇರುವುದಾಗಿ ತಿಳಿಸಿರುವ ಸದಸ್ಯರು ತಕ್ಷಣವೇ ಈ ಬಗ್ಗೆ ದಾಖಲೆಗಳನ್ನು ಕೊಡಲಿ. ಅದನ್ನು ಆದಷ್ಟು ಬೇಗನೆ ಪರಿಶೀಲನೆ ಮುಗಿಸಿ ಕ್ರಮ ಕೈಗೊಳ್ಳಬಹುದು. ಅಲ್ಲಿಯವರೆಗೆ ಭದ್ರತಾ/ ತೋಟಗಾರಿಕೆ/ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಸೇವೆಯನ್ನು ಪ್ರಸ್ತುತ ಸೇವೆ ನೀಡುತ್ತಿರುವ M/s KSF-9 Corporate Service, ಬೆಂಗಳೂರು ರವರೇ ಮುಂದುವರಿಸುತ್ತಾರೆ. ಪರಿಶೀಲನೆಯಲ್ಲಿ ಅವರ ದಾಖಲೆಗಳು ಸರಿಯಿಲ್ಲವೆಂದು ಕಂಡುಬಂದರೆ ಅವರ ಟೆಂಡರ್‌ನ್ನು ರದ್ದುಪಡಿಸಿ ಮರು ಟೆಂಡರ್ ಕರೆಯುವುದು. ಪರಿಶೀಲನೆ ಮುಗಿದ ತಕ್ಷಣವೇ ಇನ್ನೊಂದು ವಿಶೇಷ ಸಿಂಡಿಕೇಟ್ ಸಭೆ ನಡೆಸಿ ನಿರ್ಣಯ ತೆಗೆದುಕೊಳ್ಳಬಹುದು ಎಂದರು. ಬಹಳಷ್ಟು ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ/ತೋಟಗಾರಿಕೆಯ ಗಾರ್ಡ್‌ನರ್ಸ್/ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಮೂಲಕ ಒದಗಿಸುವ ಇ-ಟೆಂಡರ್‌ನಲ್ಲಿ ಅರ್ಹಗೊಂಡಿರುವ M/s KSF-9 Corporate Service, ಬೆಂಗಳೂರು ಇವರನ್ನು ಕೆಲ ಸಂಸ್ಥೆಯವರು ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿರುವುದಾಗಿ ತಿಳಿಸಿರುವ ಸಿಂಡಿಕೇಟ್ ಸದಸ್ಯರು ತಕ್ಷಣವೇ ಈ ಬಗ್ಗೆ ಅಗತ್ಯ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಒದಗಿಸಬೇಕು. ಸದರಿ ದಾಖಲೆಗಳನ್ನು ಪರಿಶೀಲಿಸಬೇಕು. ಪರಿಶೀಲನೆಯಲ್ಲಿ ದಾಖಲೆಗಳು ಸರಿ ಇಲ್ಲವೆಂದು ಕಂಡುಬಂದಲ್ಲಿ ಟೆಂಡರ್‌ನ್ನು ರದ್ದುಪಡಿಸಿ ಮರುಟೆಂಡರ್ ಕರೆಯಬೇಕು. If M/s KSF-9 Corporate Services are found to be blacklisted by a Syndicate Member, only then the Tender to be awarded may be cancelled. Sri Musaveer Basha, member of Syndicate to investigate the matter and submit report as soon as posible. "If found to be clear it may be surmised here that the Tender contract is to be awarded to KSF-9 Corporate Services". ಮುಂದಿನ ತೀರ್ಮಾನ ಆಗುವವರೆಗೆ M/s KSF-9 Corporate Service, ಬೆಂಗಳೂರು ಸಂಸ್ಥೆಯವರು ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ/ತೋಟಗಾರಿಕೆ/ಸ್ವಚ್ಛತಾ/ಗ್ಯಾಂಗ್‌ಮನ್ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆ ಒದಗಿಸುವುದನ್ನು ಮುಂದುವರಿಸಲು ನಿರ್ಣಯಿಸಲಾಯಿತು.

## ಪರೀಕ್ಷಾ ವಿಭಾಗ

**2025–ಸಿಂ–4.07:** ಪರೀಕ್ಷಾ ಕಾರ್ಯಗಳಿಗೆ ಎರಡು ವರ್ಷದ ಅವಧಿಗೆ ವಾಹನಗಳನ್ನು ಬಾಡಿಗೆ ಪಡೆಯಲು ಕರೆದಿರುವ ಇ-ಟೆಂಡರ್ ಅನುಮೋದನೆ ಕುರಿತು.

**ಚರ್ಚೆ:** ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಿರುವ ವಾಹನಗಳನ್ನು ಬಾಡಿಗೆ ಪಡೆಯುವ ಸಲುವಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಪ್ರಕ್ರಿಯೆ ನಡೆಸಲಾಗಿದ್ದು, ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹಗೊಂಡು ಫೈನಾನ್ಸಿಯಲ್ ಬಿಡ್‌ನಲ್ಲಿ ರತ್ನಾಕರ ಬಿ. ಇವರು ಉಳಿದವರಿಗಿಂತ ಕಡಿಮೆ ದರ ನಮೂದಿಸಿ ಎಲ್-1 ಆಗಿರುತ್ತಾರೆ. ಸದರಿ ಟೆಂಡರ್‌ದಾರರೊಂದಿಗೆ ದರಸಂಧಾನ ನಡೆಸಿ ದರಗಳನ್ನು ಅಂತಿಮಗೊಳಿಸಿದ್ದು, ಪರೀಕ್ಷಾ ಕಾರ್ಯಗಳಿಗೆ ವಾಹನಗಳ ತುರ್ತು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಅಗತ್ಯವಿದ್ದುದ್ದರಿಂದ ದಿನಾಂಕ: 05-05-2025 ರಿಂದ 04-05-2027 ರವರೆಗೆ ವಾಹನಗಳನ್ನು ಬಾಡಿಗೆ ಪಡೆಯಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಟೆಂಡರ್‌ದಾರರಾದ ರತ್ನಾಕರ ಬಿ. ಇವರೊಂದಿಗೆ ದರ ಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಿರುವ ವಾಹನಗಳನ್ನು ದಿನಾಂಕ:05-05-2025 ರಿಂದ 04-05-2027 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಬಾಡಿಗೆ ಆಧಾರದಲ್ಲಿ ಪಡೆಯುವ ಸಲುವಾಗಿ ನಡೆಸಲಾದ ಟೆಂಡರ್ ಪ್ರಕ್ರಿಯೆಯನ್ನು ಮತ್ತು ಟೆಂಡರ್‌ದಾರರಾದ ರತ್ನಾಕರ ಬಿ., ಇವರೊಂದಿಗೆ ಮಾಡಲಾದ ದರಗಳ ಕರಾರು ಒಪ್ಪಂದವನ್ನು ಅನುಮೋದಿಸಿ ಸ್ಥಿರೀಕರಿಸಿದ ಸಭೆಯು, ಅನುಮೋದಿತ ದರದಲ್ಲಿ ಟೆಂಡರ್‌ದಾರರಾದ ರತ್ನಾಕರ ಬಿ. ಇವರಿಂದ ಕಾಲೇಜು ಅಭಿವೃದ್ಧಿ ಪರಿಷತ್ತು ಸೇರಿದಂತೆ ವಿವಿಧ ವಿಭಾಗಗಳು ವಾಹನಗಳನ್ನು ಬಾಡಿಗೆ ಪಡೆಯಲು ಅನುಮೋದಿಸಿತು.

**2025-ಸಿಂ-4.07(ಎ):** ಪಿ.ಹೆಚ್.ಡಿ. ಸಂಶೋಧನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಗರಿಷ್ಠ ಅವಧಿಯ ಬಗ್ಗೆ.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಕುವೆಂಪು ವಿಶ್ವವಿದ್ಯಾಲಯದ ಪಿಹೆಚ್.ಡಿ. ವಿನಿಯಮಾವಳಿ – 2009ರಡಿ ಸಂಶೋಧನೆಗೆ ನೋಂದಣಿಗೊಂಡ ಪೂರ್ಣಕಾಲಿಕ ಸಂಶೋಧನಾರ್ಥಿಗಳು 5+2 ವರ್ಷಗಳಲ್ಲಿ ಮತ್ತು ಅರೆಕಾಲಿಕ ಸಂಶೋಧನಾರ್ಥಿಗಳು 6+2 ವರ್ಷಗಳಲ್ಲಿ ಸಂಶೋಧನೆ ಪೂರ್ಣಗೊಳಿಸಬೇಕು. ಆದಾಗ್ಯೂ, ವಿನಿಯಮದ 19.2ರಲ್ಲಿ ವಿಶೇಷ ಸಂದರ್ಭದಲ್ಲಿ ಮಾರ್ಗದರ್ಶಕರು ಮತ್ತು ಡಾಕ್ಟರಲ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಮರ್ಥನೀಯ ಕಾರಣವಿದ್ದಲ್ಲಿ ಮೊದಲನೇ ವರ್ಷದ ವಿಸ್ತರಣೆ ನೀಡಬಹುದಾಗಿರುತ್ತದೆ.

ಅದೇ ರೀತಿ, 2009ರ ಪಿಹೆಚ್.ಡಿ. ವಿನಿಯಮ 19.3ರನ್ವಯ ಅತೀ ವಿಶೇಷ ಸಂದರ್ಭಗಳಲ್ಲಿ (circumstances warranting a further extension of period) ಅಭ್ಯರ್ಥಿಯು ಮನವಿ ಸಲ್ಲಿಸಿದ್ದಲ್ಲಿ, ಡಾಕ್ಟರಲ್ ಸಮಿತಿಗೆ ಮನವಿಯನ್ನು ಮಂಡಿಸಿ, ನಂತರ ಡಾಕ್ಟರಲ್ ಸಮಿತಿಯ ಅಭಿಪ್ರಾಯವನ್ನು ಮಾನ್ಯ ಕುಲಪತಿಗಳಿಗೆ ಮಂಡಿಸಿ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳತಕ್ಕದೆಂದು ಉಲ್ಲೇಖಿಸಲಾಗಿರುತ್ತದೆ. ಆದರೆ, ಇಲ್ಲಿ ಎಷ್ಟು ವರ್ಷಗಳ ಅವಧಿಗೆ ವಿಸ್ತರಣೆ ನೀಡಬಹುದೆಂಬ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸದೆ, "further extension" ಎಂದಷ್ಟೆ ಉಲ್ಲೇಖಿಸಲಾಗಿದೆ. ಈ ಆಧಾರದ ಮೇಲೆ 2009ರ ವಿನಿಯಮದನ್ವಯ ನೋಂದಣಿ ಪಡೆದ ಅಭ್ಯರ್ಥಿಗಳಿಗೆ ಈ ಹಿಂದಿನಿಂದಲೂ 03 ಅಥವಾ 04 ಕ್ಕಿಂತ ಹೆಚ್ಚು ಅವಧಿಯ ವಿಸ್ತರಣೆಗಳನ್ನು ನೀಡುತ್ತಾ ಬರಲಾಗಿದೆ.

ಕುವೆಂಪು ವಿಶ್ವವಿದ್ಯಾಲಯದ ಪಿಹೆಚ್.ಡಿ. ವಿನಿಯಮಾವಳಿ-2017ರ ವಿನಿಯಮಗಳು ಘನತೆವೆತ್ತ ಸನ್ಮಾನ್ಯ ಕುಲಾಧಿಪತಿಗಳಿಂದ 2019 ರಲ್ಲಿ ಅಂಕಿತಗೊಂಡಿರುತ್ತದೆ. ಸದರಿ ವಿನಿಯಮಗಳಡಿ ನೋಂದಣಿಯಾಗಿರುವ ಅಭ್ಯರ್ಥಿಗಳಿಗೆ ವಿನಿಯಮದ ಪ್ರಕರಣ 19.1, 19.2, ಮತ್ತು 19.3ರ ಅನುಸಾರ ಪೂರ್ಣಕಾಲಿಕ ಸಂಶೋಧನಾರ್ಥಿಗೆ 5+2 ವರ್ಷಗಳು ಮತ್ತು ಅರೆಕಾಲಿಕ ಸಂಶೋಧನಾರ್ಥಿಗೆ 6+2 ವರ್ಷಗಳ ಗರಿಷ್ಠ ಮತ್ತು ಹೆಚ್ಚುವರಿ ವಿಶೇಷ ವಿಸ್ತರಣೆ ಅವಧಿಯನ್ನು ಸ್ಪಷ್ಟವಾಗಿ ನಿಗದಿಪಡಿಸಲಾಗಿರುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ 2009 ಮತ್ತು 2017ರ ವಿನಿಯಮದಡಿ ನೋಂದಣಿಗೊಂಡ ಬಹಳಷ್ಟು ಸಂಶೋಧನಾರ್ಥಿಗಳು ತಮ್ಮ ಸಂಶೋಧನೆಯನ್ನು ನಿಗದಿತ ಗರಿಷ್ಠ ಅವಧಿಯೊಳಗಾಗಲೀ ಅಥವಾ ನಿಯಮಾನುಸಾರ ಅವಕಾಶ ಕಲ್ಪಿಸಲಾದ 2 ಹೆಚ್ಚುವರಿ ವರ್ಷಗಳ ಅವಧಿ ವಿಸ್ತರಣೆಯ ನಂತರವಾಗಲೀ ಪೂರ್ಣಗೊಳಿಸಲಾಗದೇ ಮತ್ತಷ್ಟು ಹೆಚ್ಚಿನ ಅವಧಿಯ ವಿಸ್ತರಣೆಗಾಗಿ ಮನವಿ ಸಲ್ಲಿಸುತ್ತಿದ್ದಾರೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

2009 ಹಾಗೂ 2017ರ ವಿನಿಯಮದಡಿ ನೋಂದಣಿಗೊಂಡಿರುವ ಅಭ್ಯರ್ಥಿಗಳಿಗೆ ಅವಧಿ ವಿಸ್ತರಣೆಯ ಮಾನದಂಡ ಬೇರೆ ಬೇರೆಯಾಗಿದೆ. ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಎ.ಐ.ಸಿ.ಟಿ.ಇ. ನಿಯಮಗಳ ಅನ್ವಯ ನಿಗದಿತ ಅವಧಿ ಪೂರ್ಣಗೊಂಡ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ಅವಧಿ ವಿಸ್ತರಣೆ ನೀಡುವುದಿಲ್ಲ. ಬದಲಾಗಿ ಅವರು ಮರು ನೋಂದಣಿ (Re registration) ಮಾಡಿಕೊಳ್ಳಬೇಕು. ಮರು ನೋಂದಣಿ ಪಡೆದುಕೊಂಡವರಿಗೆ ಪ್ರವೇಶ ಪರೀಕ್ಷೆ ಮತ್ತು ಕೋರ್ಸ್‌ವರ್ಕ್ ಪರೀಕ್ಷೆಯಿಂದ ವಿನಾಯಿತಿ ಇದ್ದು, ಅವರು 2 ವರ್ಷಗಳಲ್ಲಿ ಸಂಶೋಧನೆ ಪೂರ್ಣಗೊಳಿಸಿ ಪಿಹೆಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸಬೇಕಾಗುತ್ತದೆ.

ಮಾನ್ಯ ಕುಲಾಧಿಪತಿಗಳಿಂದ ಅಂಕಿತಗೊಂಡ 2017ರ ವಿನಿಯಮದಡಿ ನೋಂದಣಿಗೊಂಡ ಅಭ್ಯರ್ಥಿಗಳಿಗೆ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಯ ವಿಸ್ತರಣೆ ಮಾಡಿದಲ್ಲಿ ವಿನಿಯಮದ ಉಲ್ಲಂಘನೆಯಾಗಬಹುದಾಗಿರುತ್ತದೆ. ಆದ್ದರಿಂದ, ಸಂಶೋಧನೆಯನ್ನು ಪೂರ್ಣಗೊಳಿಸಲು ನಿಗದಿತ ಅವಧಿಗೂ ಮೀರಿ, 2009ರ ವಿನಿಯಮದಡಿ ನೋಂದಣಿಯಾದ ಅಭ್ಯರ್ಥಿಗಳು ಮತ್ತು 2017ರ ವಿನಿಯಮದಡಿ ನೋಂದಣಿಯಾದ ಅಭ್ಯರ್ಥಿಗಳು ಅವಧಿ ವಿಸ್ತರಣೆಯ ಕುರಿತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ತಮ್ಮ ಸಂಶೋಧನೆಯನ್ನು ಪೂರ್ಣಗೊಳಿಸಿ ಮಹಾಪ್ರಬಂಧವನ್ನು ಸಲ್ಲಿಸಲು 5+2 ವರ್ಷಗಳು ಮತ್ತು ಅರೆಕಾಲಿಕ ಸಂಶೋಧನಾರ್ಥಿಗಳಿಗೆ 6+2 ವರ್ಷಗಳ ಗರಿಷ್ಠ ಅವಧಿಯನ್ನು ಪರಿಗಣಿಸಬೇಕೆಂದು ಹಾಗೂ ಈಗಾಗಲೇ ಅವಧಿ ವಿಸ್ತರಣೆ ಪಡೆದುಕೊಂಡಿರುವವರು ಮುಂಬರುವ ಮಾರ್ಚ್–2026 ರೊಳಗೆ ಸಂಶೋಧನೆಯನ್ನು ಪೂರ್ಣಗೊಳಿಸಿ ಮಹಾಪ್ರಬಂಧ ಸಲ್ಲಿಸಬೇಕು. ಅವರಿಗೆ ಮತ್ತೆ ಅವಧಿ ವಿಸ್ತರಣೆ ಮಾಡುವಂತಿಲ್ಲ ಎಂದು ನಿರ್ಣಯಿಸಿದ ಸಭೆಯು ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿರುವಂತೆ ಮರು ನೋಂದಣಿ (Re-registration) ಕುರಿತಾಗಿ ಪರಿಶೀಲಿಸಬೇಕೆಂದು ನಿರ್ಣಯಿಸಲಾಯಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2025–ಸಿಂ–4.08:** ಶ್ರೀ ಪ್ರತಾಪ್ ವಿ.ಎಲ್. ಗಣಕಯಂತ್ರ ನಿರ್ವಾಹಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಶ್ರೀ ಪ್ರತಾಪ್ ವಿ.ಎಲ್. ಗಣಕಯಂತ್ರ ನಿರ್ವಾಹಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕುವೆಂಪು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಸದರಿಯವರ ಮನವಿಯ ಮೇರೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಶ್ರೀ ಪ್ರತಾಪ್ ವಿ.ಎಲ್. ಗಣಕಯಂತ್ರ ನಿರ್ವಾಹಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರನ್ನು ವರ್ಗಾಯಿಸಲು ಕುವೆಂಪು ವಿಶ್ವವಿದ್ಯಾಲಯದಲ್ಲಿ ಗಣಕಯಂತ್ರ ನಿರ್ವಾಹಕರ ಹುದ್ದೆ ಖಾಲಿ ಇದೆಯೇ? ಎಂಬ ಬಗ್ಗೆ ಮಾಹಿತಿಯನ್ನು ಹಾಗೂ ಸದರಿಯವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ಸಮೇತ ವರ್ಗಾವಣೆ ಮಾಡಿಕೊಳ್ಳಲು ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೇಳಿರುತ್ತಾರೆ. ಆದರೆ, ಕುವೆಂಪು ವಿಶ್ವವಿದ್ಯಾಲಯಕ್ಕೆ ಗಣಕಯಂತ್ರ ನಿರ್ವಾಹಕ ಹುದ್ದೆಯು ಮಂಜೂರಾಗಿರುವುದಿಲ್ಲ ಎಂಬ ಮಾಹಿತಿಯೊಂದಿಗೆ ಸಭೆಯ ಅನುಮೋದನೆಗಾಗಿ ಮಂಡಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಶ್ರೀ ಬಿ.ಎನ್.ಶಶಿಧರ್ ರವರು ಮಾತನಾಡಿ, ಶ್ರೀ ಪ್ರತಾಪ್ ವಿ.ಎಲ್. ರವರು ಹುದ್ದೆ ಸಹಿತವಾಗಿ ಬರುವುದರಿಂದ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುತ್ತದೆ ಮತ್ತು ಹೆಚ್ಚುವರಿಯಾಗಿ ಒಂದು ಹುದ್ದೆ ದೊರಕುತ್ತದೆ. ಆದುದರಿಂದ ಅನುಮತಿಸಬಹುದು ಎಂದರು.

ನಿರ್ಣಯ: ಚರ್ಚೆಯ ನಂತರ, ಶ್ರೀ ಪ್ರತಾಪ್ ವಿ.ಎಲ್. ಗಣಕಯಂತ್ರ ನಿರ್ವಾಹಕರು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ಸಹಿತ ವರ್ಗಾವಣೆ ಹೊಂದಲು ಅನುಮತಿಸಲು ಮತ್ತು ಸರ್ಕಾರ ಕೇಳಿರುವ ಮಾಹಿತಿಗಳನ್ನು ಸಮರ್ಪಕವಾಗಿ ಒದಗಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಿತು.

**2025–ಸಿಂ–4.09:** ಸಿಬ್ಬಂದಿಗಳ ವೈದ್ಯಕೀಯ ಚಿಕಿತ್ಸೆಗಾಗಿ ವಿಶ್ವವಿದ್ಯಾಲಯದಿಂದ ಖಾಸಗಿ ಆಸ್ಪತ್ರೆಗೆ ಮಾನ್ಯತೆ ನೀಡುವ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ, ಪಾಸಿಟೀವ್ ಮೈಂಡ್ ಹಾಸ್ಪಿಟಲ್, ಶಿವಮೊಗ್ಗ ಇವರು ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಚಿಕಿತ್ಸೆ ನೀಡಿದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಭರಿಕೆ ಮಾಡಲು ತಮ್ಮ ಆಸ್ಪತ್ರೆಗೆ ವಿಶ್ವವಿದ್ಯಾಲಯದಿಂದ ಮಾನ್ಯತೆ ನೀಡುವಂತೆ ಕೋರಿದ್ದಾರೆ. ಆದರೆ, ಸದರಿ ಆಸ್ಪತ್ರೆಯು ವೈದ್ಯಕೀಯ ಚಿಕಿತ್ಸೆ ನೀಡಿದ ಬಿಲ್ಲುಗಳ ಮರುಭರಿಕೆಗೆ ಸರ್ಕಾರದಿಂದ ಮಾನ್ಯತೆ ಹೊಂದಿರುವುದಿಲ್ಲ. ಈ ಹಿಂದೆ ಕೆಲವು ನೌಕರರುಗಳಿಗೆ ಸರ್ಕಾರದಿಂದ ಮಾನ್ಯತೆ ಪಡೆಯದ, ಆದರೆ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಬಿಲ್ಲುಗಳನ್ನು ಮರುಭರಿಕೆ ಮಾಡಲಾಗಿದೆ. ಆದರೆ, ಲೆಕ್ಕಪರಿಶೋಧನೆಯಲ್ಲಿ ವಿಶ್ವವಿದ್ಯಾಲಯ ಮಾನ್ಯತೆ ನೀಡಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಸಲ್ಲಿಸುವ ವೈದ್ಯಕೀಯ ಮರುಭರಿಕೆ ಬಿಲ್ಲುಗಳಿಗೆ ಸಂಬಂಧಿಸಿದಂತೆ ಪರಿನಿಯಮ ರಚಿಸಲಾಗಿದೆಯೇ ಎಂದು ಕೇಳಲಾಗಿದ್ದು, ಯಾವುದೇ ಪರಿನಿಯಮ ರಚಿಸಿಕೊಂಡಿರುವುದಿಲ್ಲ ಎಂದು ತಿಳಿಸಲಾಗಿ, ಪರಿನಿಯಮ ರಚಿಸಿಕೊಂಡು ಸರ್ಕಾರದಿಂದ ಅನುಮೋದನೆ ಪಡೆದುಕೊಂಡು ನಂತರ ವಿಶ್ವವಿದ್ಯಾಲಯ ಮಾನ್ಯತೆ ನೀಡಿರುವ ಆಸ್ಪತ್ರೆಗಳ ಬಿಲ್ಲುಗಳನ್ನು ಪರಿಗಣಿಸುವಂತೆ ಲೆಕ್ಕಪರಿಶೋಧಕರು ತಿಳಿಸಿದ್ದಾರೆ ಎಂದರು.

ಡಾ.ಜಿ. ಮಧು ರವರು ಮಾತನಾಡಿ, ಆಸ್ಪತ್ರೆಗಳು ಸರ್ಕಾರದಿಂದ ಮಾನ್ಯತೆ ಪಡೆಯದಿದ್ದಲ್ಲಿ ವೈದ್ಯಕೀಯ ವೆಚ್ಚದ ಹಣವನ್ನು ಮರುಭರಿಕೆ ಮಾಡಲು ಅವಕಾಶ ಇರುವುದಿಲ್ಲ ಎಂದರು. ಶ್ರೀ ಶಶಿಧರ್ ರವರು ಮಾತನಾಡಿ, ಈ ಹಿಂದೆ ಸರ್ಕಾರದಿಂದ ಮಾನ್ಯತೆ ಪಡೆದ ಹಾಗೂ ಪಡೆಯದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ವೆಚ್ಚವನ್ನು ಮರುಭರಿಕೆ ಮಾಡಿದೆ. ಈಗ ನೀಡುವುದಿಲ್ಲ ಎಂಬುದು ಸರಿಯಲ್ಲ ಎಂದರು. ಕುಲಸಚಿವರು ಮಾತನಾಡಿ ಆಡಿಟ್ ಆಕ್ಷೇಪಣೆಯಾಗಿದೆ. ಆದಾಗ್ಯೂ, ನೌಕರರು ಚಿಕಿತ್ಸೆ ಪಡೆದ ಬಿಲ್ಲುಗಳನ್ನು ಸಲ್ಲಿಸುತ್ತಿದ್ದಾರೆ ಎಂದರು.

ನಿರ್ಣಯ: ಚರ್ಚೆಯ ನಂತರ, ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ವೈದ್ಯಕೀಯ ಮರುಭರಿಕೆ ಬಿಲ್ಲುಗಳನ್ನು ಮಾತ್ರ ಮರುಭರಿಕೆ ಮಾಡಲು ಪರಿಗಣಿಸಬೇಕೆಂದು ನಿರ್ಣಯಿಸಿದ ಸಭೆಯು, ಪಾಸಿಟೀವ್ ಮೈಂಡ್ ಹಾಸ್ಪಿಟಲ್, ಶಿವಮೊಗ್ಗ ಇವರಿಗೆ ಮಾನ್ಯತೆ ನೀಡದಿರಲು ನಿರ್ಣಯಿಸಿತು.

**2025–ಸಿಂ–4.10:** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕನಿಷ್ಠ ವೇತನ ದರಗಳಂತೆ "ಸಿ" "ಡಿ" ಮತ್ತು ಇತರೆ ದರ್ಜೆಯ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ Wisdom Security Service, Bengaluru ಈ ಸಂಸ್ಥೆಯಿಂದ ಪಡೆಯುವ ಬಗ್ಗೆ..

ಚರ್ಚೆ: ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಿರುವ ಮೆ॥ ಕೆ.ಎಸ್.ಎಫ್–9, ಬೆಂಗಳೂರು ಈ ಸಂಸ್ಥೆಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕಾರ್ಯಾವಧಿಯು ದಿನಾಂಕ:22–06–2023 ರಂದು ಮುಕ್ತಾಯಗೊಂಡಿದ್ದು, ದಿನಾಂಕ:16–06–2023 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಕರ್ನಾಟಕ ಸರ್ಕಾರದ ಕೆ.ಟಿ.ಪಿ.ಪಿ. ನಿಯಮಾನುಸಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಪ್ರಕ್ರಿಯೆ ಕೈಗೊಂಡು, ಸದರಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಪ್ರಸ್ತುತ ಹೊರಗುತ್ತಿಗೆ ಸೇವೆ ಒದಗಿಸುತ್ತಿರುವ ಮೆ॥ ಕೆ.ಎಸ್.ಎಫ್–9 ಕಾರ್ಪೊರೇಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯ ಕಾರ್ಯಾವಧಿಯನ್ನು ವಿಸ್ತರಿಸಲಾಗಿರುತ್ತದೆ.

ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಆರಂಭವಾದ ಅಧ್ಯಯನ ಮತ್ತು ಆಡಳಿತ ವಿಭಾಗಗಳಲ್ಲಿನ ಹೆಚ್ಚುವರಿ ಕರ್ತವ್ಯದ ಹೊರೆ, ನೌಕರರ ನಿವೃತ್ತಿಯಿಂದ ತೆರವಾದ ಸ್ಥಾನಗಳು ಮತ್ತು ಹೊಸ ನೇಮಕಾತಿಗೆ ಸರ್ಕಾರದಿಂದ ನಿರ್ಬಂಧ ಇರುವ ಕಾರಣದಿಂದ ವಿವಿಧ ವಿಭಾಗ ಮತ್ತು ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸಲು ಖಾಯಂ ಅಧ್ಯಾಪಕೇತರ ನೌಕರರುಗಳ ಕೊರತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನ ಜ್ಞಾನಸಹ್ಯಾದ್ರಿ, ಆವರಣದಲ್ಲಿರುವ ವಿವಿಧ ಆಡಳಿತ ಕಛೇರಿಗಳು/ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಸ್ನಾತಕೋತ್ತರ ಕೇಂದ್ರ, ಕಡೂರು/ಚಿಕ್ಕಮಗಳೂರು/ಘಟಕ ಕಾಲೇಜುಗಳು/ನೇರ ಆಡಳಿತಕ್ಕೊಳಪಟ್ಟ ಕಾಲೇಜು/ನಗರ ಕಛೇರಿ/ಕೆಳದಿ ವಸ್ತು ಸಂಗ್ರಹಾಲಯ ಮುಂತಾದ ಸ್ಥಳಗಳಲ್ಲಿ ಆಡಳಿತಾತ್ಮಕ ಕೆಲಸ ಕಾರ್ಯಗಳ ಸುಗಮ ನಿರ್ವಹಣೆಗಾಗಿ ಅವಶ್ಯವಿರುವ 'ಸಿ', 'ಡಿ', ಮತ್ತು ಇತರೆ ದರ್ಜೆಯ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ 02 ವರ್ಷಗಳ ಅವಧಿಗೆ ಒದಗಿಸಲು ಕೆ.ಟಿ.ಪಿ.ಪಿ. ಕಾಯ್ದೆ–1999ರ ನಿಯಮ 2000ರನ್ವಯ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನ ದರಗಳಂತೆ, ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ:15–01–2025 ರಂದು ಟೆಂಡರ್ ಆಹ್ವಾನಿಸಲಾಗಿತ್ತು. ವಿಶ್ವವಿದ್ಯಾಲಯದ ಪ್ರಕಟಣೆಗೆ ಅನುಗುಣವಾಗಿ ಇ–ಟೆಂಡರ್ ಮೂಲಕ ಭಾಗವಹಿಸಿದ್ದವರಲ್ಲಿ ಅರ್ಹಗೊಂಡಿದ್ದ 08 ಸಂಸ್ಥೆಗಳು ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸಿದ್ದ ದಾಖಲಾತಿಗಳನ್ನು ವಿಶ್ವವಿದ್ಯಾಲಯವು ರಚಿಸಿದ್ದ ಟೆಂಡರ್ ಪರಿಶೀಲನಾ ಸಮಿತಿಯು ಟೆಂಡರ್ ಅರ್ಜಿಯಲ್ಲಿನ ಷರತ್ತುಗಳಂತೆ ಅರ್ಜಿದಾರರು ಸಲ್ಲಿಸಿದ್ದ ದಾಖಲಾತಿಗಳನ್ನು ಪರಿಶೀಲಿಸಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ಮತ್ತು ಹಣಕಾಸು ಬಿಡ್‌ನಲ್ಲಿ ನಿಗದಿಪಡಿಸಿದ ಮಾನದಂಡಗಳು ಹಾಗೂ ಅಂಕಗಳನ್ವಯ ಮೌಲ್ಯಮಾಪನ ಮಾಡಿದ್ದು, ಸದರಿ ಬಿಡ್‌ದಾರರು ಗಳಿಸಿರುವ ಅಂಕಗಳನ್ನು ಮತ್ತು ಹಣಕಾಸು ಬಿಡ್‌ನಲ್ಲಿನ ಕನಿಷ್ಠ ದರಗಳನ್ನು ಪರಿಗಣಿಸಿ, Wisdom Security Service, Bengaluru ಈ ಸಂಸ್ಥೆಯವರು ಎಲ್1 ಆಗಿರುತ್ತಾರೆ ಎಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಜ್ಞಾನ ಸಹ್ಯಾದ್ರಿ, ಶಂಕರಘಟ್ಟ ಆವರಣದಲ್ಲಿರುವ ವಿವಿಧ ಆಡಳಿತ ಕಛೇರಿಗಳು/ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಸ್ನಾತಕೋತ್ತರ ಕೇಂದ್ರ, ಕಡೂರು/ ಚಿಕ್ಕಮಗಳೂರು/ಘಟಕ ಕಾಲೇಜುಗಳು/ನೇರ ಆಡಳಿತಕ್ಕೊಳಪಟ್ಟ ಕಾಲೇಜು/ನಗರ ಕಛೇರಿ/ಕೆಳದಿ ವಸ್ತು ಸಂಗ್ರಹಾಲಯ ಮುಂತಾದವುಗಳಲ್ಲಿ ಕರ್ತವ್ಯ ನಿರ್ವಹಿಸಲು ಅವಶ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ, ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನ ದರಗಳು ಹಾಗೂ ಸೇವಾ ಶುಲ್ಕ ಶೇಕಡ 04 ರಂತೆ ಮೆ: ವಿಸ್‌ಡಂ ಸೆಕ್ಯುರಿಟಿ ಸರ್ವೀಸ್, ಬೆಂಗಳೂರು - ಈ ಸಂಸ್ಥೆಯು ದಿನಾಂಕ:01–06–2025 ರಿಂದ 31–05–2027 ರವರೆಗೆ 02 (ಎರಡು) ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ 'ಸಿ', 'ಡಿ' ಮತ್ತು ಇತರೆ ದರ್ಜೆಯ ಸಿಬ್ಬಂದಿಗಳ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ನಡೆಸಲಾದ ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸಲಾಯಿತು ಮತ್ತು ಸದರಿ ಸಂಸ್ಥೆಯವರು ಹೊರಗುತ್ತಿಗೆ ನೌಕರರಿಗೆ ಸಕಾಲದಲ್ಲಿ ವೇತನ ಭತ್ಯೆಗಳನ್ನು ಪಾವತಿಸಬೇಕು ಮತ್ತು ಪಿ.ಎಫ್. ಹಾಗೂ ಇ.ಎಸ್.ಐ. ವಂತಿಕೆಯನ್ನು ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ನಿಯಮಿತವಾಗಿ ಪಾವತಿಸಬೇಕೆಂಬ ಕಟ್ಟುನಿಟ್ಟಿನ ಷರತ್ತನ್ನು ವಿಧಿಸಬೇಕೆಂದು ನಿರ್ಣಯಿಸಿದ ಸಭೆಯು ದಿನಾಂಕ:16-06-2023 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿದಂತೆ ಹೊಸ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಾದೇಶಮೊಂದಿಗೆ ಏಜನ್ಸಿಯನ್ನು ನೇಮಿಸುವವರೆಗೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಪಾವತಿಸುವ ಕುರಿತು ಸಭೆಯು ಅನುಮೋದನೆ ನೀಡಿತು ಮತ್ತು ಬಾಕಿ ಇರುವ ಹಣಕಾಸಿನ ಲಭ್ಯತೆ ಆಧಾರದ ಮೇಲೆ ಪಾವತಿಸುವಂತೆ ಸಭೆಯು ನಿರ್ಣಯಿಸಿತು.

**2025-ಸಿಂ-4.10(ಎ):** ಪ್ರೊ.ಹೆಚ್.ಎಸ್. ಭೋಜ್ಯಾನಾಯ್ಕ, ಹಿರಿಯ ಪ್ರಾಧ್ಯಾಪಕರು ಇವರು ಕೆ.ಪಿ.ಎಸ್.ಸಿ. ಸದಸ್ಯರಾಗಿ ನೇಮಕಗೊಂಡಿರುವುದರಿಂದ ವಿಶ್ವವಿದ್ಯಾಲಯದಿಂದ ಬಿಡುಗಡೆಗೊಳಿಸಿ ನಿವೃತ್ತಿ ಎಂದು ಭಾವಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾಗಿದ್ದ ಪ್ರೊ.ಹೆಚ್.ಎಸ್.ಭೋಜ್ಯಾನಾಯ್ಕ – ಇವರು ಕರ್ನಾಟಕ ಲೋಕ ಸೇವಾ ಆಯೋಗದ ಸದಸ್ಯರಾಗಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:195 ಎಸ್‌ಎಲ್‌ಎ 2023 ಬೆಂಗಳೂರು, ದಿನಾಂಕ:05-09-2024 ರನ್ವಯ ನೇಮಕ ಗೊಂಡಿರುವುದರಿಂದ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸುವಂತೆ ಕೋರಿರುವ ಮೇರೆಗೆ, ದಿನಾಂಕ:05-09-2024ರ ಅಪರಾಹ್ನದಿಂದ ಅನ್ವಯವಾಗುವಂತೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಹಾಗೂ ಸದರಿ ಕ್ರಮವನ್ನು ದಿನಾಂಕ:19-11-2024 ರ ಸಿಂಡಿಕೇಟ್ ಸಭೆಯಲ್ಲಿ ಸ್ಥಿರೀಕರಿಸಲಾಗಿದೆ.

ಮುಂದುವರೆದು, ಕರ್ನಾಟಕ ಲೋಕಸೇವಾ ಆಯೋಗದ (Conditions of Service) Regulations, 1957 Notification No:GAD(OM)04 PSC 57, dated: 12-12-1957 ರಲ್ಲಿನ ನಿಯಮಗಳ ಭಾಗ-2 4(2)ರಲ್ಲಿ A member who on the date of his appointment to the Commission, was in the service of the Central or State Government shall be deemed to have retired from such service with – effect from the date of his appointment as Member of the Commission ಎಂದಿರುತ್ತದೆ. ಪ್ರೊ.ಹೆಚ್.ಎಸ್.ಭೋಜ್ಯಾನಾಯ್ಕ ಇವರನ್ನು ದಿನಾಂಕ:05-09-2024ರ ಅಪರಾಹ್ನದಿಂದ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಸೇವೆಯಿಂದ ಬಿಡುಗಡೆಗೊಳಿಸಿರುವುದರಿಂದ ಮೇಲ್ಕಂಡ ನಿಯಮದನ್ವಯ ಸದರಿ ದಿನಾಂಕದಿಂದ ಸದರಿ ಹಿರಿಯ ಪ್ರಾಧ್ಯಾಪಕರು ನಿವೃತ್ತಿ ಹೊಂದಿರುವುದಾಗಿ ಭಾವಿಸಬೇಕಾಗುತ್ತದೆ. ವಿಶ್ವವಿದ್ಯಾಲಯದಲ್ಲಿ ನೇಮಕಾತಿ, ವೃತ್ತಿ ಪದೋನ್ನತಿ, ನಿವೃತ್ತಿಗಳಿಗೆ ಅನುಮತಿ ನೀಡುವ ಪ್ರಾಧಿಕಾರವು ಸಿಂಡಿಕೇಟ್ ಆಗಿರುವುದರಿಂದ ಮೇಲ್ಕಂಡ ನಿಯಮದನ್ವಯ ಪ್ರೊ.ಹೆಚ್.ಎಸ್.ಭೋಜ್ಯಾನಾಯ್ಕ ಇವರನ್ನು ನಿವೃತ್ತಿ ಹೊಂದಿರುವುದಾಗಿ ಭಾವಿಸಿ ನಿವೃತ್ತಿಗೊಳಿಸಲು ಅನುಮೋದನೆಗಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾಗಿದ್ದ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ – ಇವರು ಕರ್ನಾಟಕ ಲೋಕ ಸೇವಾ ಆಯೋಗದ ಸದಸ್ಯರಾಗಿ ನೇಮಕಗೊಂಡಿರುವುದರಿಂದ, ಅವರನ್ನು ದಿನಾಂಕ:05–09–2024ರ ಅಪರಾಹ್ನದಿಂದ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಸೇವೆಯಿಂದ ಬಿಡುಗಡೆಗೊಳಿಸಿರುವುದನ್ನು ಕೆ.ಪಿ.ಎಸ್.ಸಿ. ನಿಯಮಗಳನ್ವಯ ಅವರು ನಿವೃತ್ತಿ ಹೊಂದಿರುವುದಾಗಿ ಭಾವಿಸಿ, ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿಗೊಳಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

2025–ಸಿಂ–4.10(ಬಿ): ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಇವರಿಗೆ ಕೆನಡಾ ದೇಶಕ್ಕೆ ತೆರಳಲು ಅನುಮತಿ ನೀಡುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಶರತ್ ಅನಂತಮೂರ್ತಿ – ಇವರು ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಕೆನಡಾ ದೇಶದಲ್ಲಿರುವ ಕುಟುಂಬ ಸದಸ್ಯರನ್ನು ಭೇಟಿ ಮಾಡುವ ಸಲುವಾಗಿ ವಿಶ್ವವಿದ್ಯಾಲಯದಿಂದ ಯಾವುದೇ ಆರ್ಥಿಕ ಸೌಲಭ್ಯಗಳನ್ನು ಪಡೆಯದೆ, ತಮ್ಮ ಸ್ವಂತ ಖರ್ಚಿನಲ್ಲಿ ದಿನಾಂಕ:14–07–2025 ರಿಂದ ದಿನಾಂಕ:25–07–2025 ರವರೆಗೆ 12 ದಿನಗಳ (ದಿನಾಂಕ:26–07–2025 ಮತ್ತು 27–07–2025ರ ಸಾರ್ವತ್ರಿಕ ರಜೆ ಬಳಸಿಕೊಂಡು) ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ಕೆನಡಾ ದೇಶಕ್ಕೆ ಹೋಗಿಬರಲು ಸಭೆಯು ಸರ್ವಾನುಮತದಿಂದ ಅನುಮತಿಸಿತು.

2025–ಸಿಂ–4.10(ಸಿ): ಪ್ರೊ. ಸೈಯದ್ ಅಶ್ವಕ್ ಅಹಮದ್, ಹಿರಿಯ ಪ್ರಾಧ್ಯಾಪಕರು ಇವರಿಗೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ, ಪ್ರೊ. ಸೈಯದ್ ಅಶ್ವಕ್ ಅಹಮದ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಭೂವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ–ಇವರು ಮನವಿ ಸಲ್ಲಿಸಿ, ತಾನು ಖಾಜಾ ಬಂದಾನವಾಝ್ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿ Pro-Vice-Chancellor ಆಗಿ ನೇಮಕ ಹೊಂದಿರುವುದರಿಂದ ಸದರಿ ಅವಕಾಶವನ್ನು ಅವರು ಒಪ್ಪಿಕೊಳ್ಳುವುದಾಗಿಯೂ ಹಾಗೂ ಸದರಿ ಹುದ್ದೆಯನ್ನು ದಿನಾಂಕ:02–06–2025 ರಿಂದ ವಹಿಸಿಕೊಳ್ಳಲು ಯೋಚಿಸಿರುವುದರಿಂದ ಸ್ವಯಂ ನಿವೃತ್ತಿ ನೀಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ ಅವರು ವಿಶ್ವವಿದ್ಯಾಲಯದ ಖಾಯಂ ನೌಕರರಾಗಿದ್ದು, ದಿನಾಂಕ:27–05–1998 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದು, ಈವರೆಗೆ 27 ವರ್ಷಗಳ ಸೇವೆ ಸಲ್ಲಿಸಿರುತ್ತಾರೆ. ಸ್ವಯಂ ನಿವೃತ್ತಿ ಪಡೆಯಲು ಕೆ.ಸಿ.ಎಸ್.ಆರ್. ನಿಯಮ 285(3)(4)(ಎ)(ಬಿ) ರ ಪ್ರಕಾರ ಕನಿಷ್ಠ 15 ವರ್ಷಗಳ ಕಾಲ ಸೇವೆ ಸಲ್ಲಿಸುವುದು ಅಗತ್ಯವಾಗಿದ್ದು, ಇವರು 27 ವರ್ಷ ಸೇವೆ ಸಲ್ಲಿಸಿರುವುದರಿಂದ ಅರ್ಹರಿದ್ದಾರೆ ಎಂದರು.

ನಿರ್ಣಯ: ಚರ್ಚೆಯ ನಂತರ ಪ್ರೊ. ಸೈಯದ್ ಅಶ್ವಕ್ ಅಹಮದ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಭೂವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ– ಇವರು ಖಾಜಾ ಬಂದಾನವಾಝ್ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿ Pro-Vice-Chancellor ಆಗಿ ನೇಮಕ ಹೊಂದಿರುವುದರಿಂದ ಕೆ.ಸಿ.ಎಸ್, ನಿಯಮ 285(3)(4)(ಎ)(ಬಿ)ರನ್ವಯ ಅವರು ವಿಶ್ವವಿದ್ಯಾಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಸಭೆಯು ಅನುಮತಿ ನೀಡಲು ನಿರ್ಣಯಿಸಿತು.

2025–ಸಿಂ–4.10(ಡಿ): ಪ್ರೊ.ಗುರುಲಿಂಗಯ್ಯ ಎಂ, ಹಿರಿಯ ಪ್ರಾಧ್ಯಾಪಕರು– ಇವರಿಗೆ ಸಬ್ಯಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ನಿರ್ಣಯ: ಪ್ರೊ.ಗುರುಲಿಂಗಯ್ಯ ಎಂ. ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ – ಇವರು 'ಕರ್ನಾಟಕದ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳ ಸಮಸ್ಯೆಗಳು ಮತ್ತು ಅನನ್ಯತೆಯ ಬಿಕ್ಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ದೃಷ್ಟಿಕೋನ' ಎಂಬ ವಿಷಯದ ಕುರಿತು ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದರಿಂದ ದಿನಾಂಕ: 28-07-2025 ರಿಂದ 27-07-2026 ರವರೆಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ಕೋರಿದ್ದು, ವಿಶ್ವವಿದ್ಯಾಲಯದ ಸಬ್ಬಾಟಿಕಲ್ ರಜೆಯ ಪರಿನಿಯಮಗಳನ್ವಯ ಅರ್ಹತೆ ಹೊಂದಿರುವ ಹಿನ್ನೆಲೆಯಲ್ಲಿ ಅವರಿಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯ ಮೇಲೆ ತೆರಳಲು ಅನುಮತಿಸಿದ ಸಭೆಯು, ರಜೆ ಮುಗಿಸಿಕೊಂಡು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಅವರು ಸಿದ್ಧಪಡಿಸಿ ಹೊರತಂದ ಗ್ರಂಥದ ಪ್ರತಿಯನ್ನು ಕೂಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ತಿಳಿಸಲು ನಿರ್ಣಯಿಸಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2025–ಸಿಂ–4.11:** ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇಲ್ಲಿನ ರೂಸಾ ಅನುದಾನದಲ್ಲಿ Desktop Computers and Other Equipments ಗಳನ್ನು ಖರೀದಿಸುವ ಕುರಿತಂತೆ ಇ-ಟೆಂಡರ್ ಪ್ರಕ್ರಿಯೆ ಅನುಮೋದನೆ ಬಗ್ಗೆ.

ಚರ್ಚೆ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇಲ್ಲಿಗೆ ರೂಸಾ ಅನುದಾನದಲ್ಲಿ Desktop Computers, and Other Equipments ಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಸಲುವಾಗಿ ರೂ.40.00 ಲಕ್ಷಗಳನ್ನು ಮಂಜೂರು ಮಾಡಿರುವ ಹಿನ್ನಲೆಯಲ್ಲಿ ದಿನಾಂಕ:15-01-2025ರಂದು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು. ವಿಶ್ವವಿದ್ಯಾಲಯದ ಪ್ರಕಟಣೆಯ ಮೇರೆಗೆ ಟೆಂಡರ್‌ನಲ್ಲಿ ಭಾಗವಹಿಸಿದ್ದ ಎಲ್ಲಾ 9 ಸಂಸ್ಥೆಗಳು ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾಗಿ ಫೈನಾನ್ಸಿಯಲ್ ಬಿಡ್‌ಗೆ ಅರ್ಹತೆ ಪಡೆದಿದ್ದವು. ಸದರಿ 9 ಸಂಸ್ಥೆಗಳಲ್ಲಿ Desktop Computersಗಳಿಗೆ M/s Gen Next Computers, Bijapur – ಇವರು ಎಲ್-1 ಸಂಸ್ಥೆಯಾಗಿರುತ್ತಾರೆ. ಮುಂದುವರೆದು, Other Equipments like (1) Smart Board and other related accessories including digital, (2) LED Projector Screen and other related accessories and (3) 1 KVA – Online UPS System IGBT Based PWN Technology Tubular Batteries ಈ 03 ಪರಿಕರಗಳಿಗೆ M/S Smart Solutions, Haveri – ಇವರು ಎಲ್-1 ಸಂಸ್ಥೆಯಾಗಿರುತ್ತಾರೆ ಎಂಬ ಮಾಹಿತಿಯೊಂದಿಗೆ ಟೆಂಡರ್‌ನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.

ನಿರ್ಣಯ: ಚರ್ಚೆಯ ನಂತರ, ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ಸರ್ಕಾರದಿಂದ ಮಂಜೂರಾಗಿರುವ ರೂಸಾ ಅನುದಾನದಲ್ಲಿ ಡೆಸ್ಕ್‌ಟಾಪ್ ಕಂಪ್ಯೂಟರ್ ಮತ್ತು Other Equipments like (1) Smart Board and other related accessories including digital, (2) LED Projector Screen and other related accessories and (3) 1 KVA– Online UPS System IGBT Based PWN Technology TUBULAR Batteries ಖರೀದಿಸಲು ನಡೆಸಲಾದ ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

**2025–ಸಿಂ–4.12:** ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇಲ್ಲಿನ ರೂಸಾ ಅನುದಾನದಲ್ಲಿ Desktop Computers and Other Equipments ಗಳನ್ನು ಖರೀದಿಸುವ ಕುರಿತಂತೆ ಇ–ಟೆಂಡರ್ ಪ್ರಕ್ರಿಯೆ ಅನುಮೋದನೆ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜಿಗೆ ಬಿಡುಗಡೆ ಮಾಡಿರುವ ರೂಸಾ ಅನುದಾನದಲ್ಲಿ Desktop Computers and Laptops ಗಳನ್ನು ಇ–ಟೆಂಡರ್ ಮೂಲಕ ಖರೀದಿಸಲು ರೂ.25.00 ಲಕ್ಷಗಳನ್ನು ಮಂಜೂರು ಮಾಡಿ "The successful bidder will supply the Desktop Computers and Other Equipments as per the work order. The bills for payment under RUSA Grant should be submitted to Government of Karnataka through Sahyadri Arts College, Shivamogga. The amount will be paid directly to the vendor through Government of Karnataka" ಎಂದು ಸೂಚಿಸಿರುವ ಹಿನ್ನೆಲೆಯಲ್ಲಿ ದಿನಾಂಕ:15–01–2025ರಲ್ಲಿ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿತ್ತು.

ವಿಶ್ವವಿದ್ಯಾಲಯದ ಪ್ರಕಟಣೆಯ ಮೇರೆಗೆ ಇ–ಟೆಂಡರ್‌ನಲ್ಲಿ ಒಟ್ಟು 12 ಬಿಡ್‌ದಾರರು ಭಾಗವಹಿಸಿದ್ದು, ಅದರಲ್ಲಿ 10 ಸಂಸ್ಥೆಗಳು ಟೆಕ್ನಿಕಲ್ ಬಿಡ್‌ನಲ್ಲಿ ಯಶಸ್ವಿಯಾಗಿ ಫೈನಾನ್ಸಿಯಲ್ ಬಿಡ್‌ಗೆ ಅರ್ಹತೆ ಪಡೆದಿದ್ದವು. ಫೈನಾನ್ಸಿಯಲ್ ಬಿಡ್‌ನಲ್ಲಿ Desktop Computersಗೆ ಉಳಿದವರಿಗಿಂತ ಕಡಿಮೆ ದರ ನಮೂದಿಸಿದ್ದ M/s Eswar Enterprieses, Banglore – ಇವರು ಎಲ್–1 ಸಂಸ್ಥೆಯಾಗಿದ್ದು, Laptops ಗಳಿಗೆ ಉಳಿದವರಿಗಿಂತ ಕಡಿಮೆ ದರ ನಮೂದಿಸಿದ್ದ M/S Smart Solutions, Haveri – ಇವರು ಎಲ್–1 ಸಂಸ್ಥೆಯಾಗಿರುತ್ತಾರೆ. ಆದುದರಿಂದ ಸದರಿ ಟೆಂಡರ್‌ನ್ನು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ಸಹ್ಯಾದ್ರಿ ಕಲಾ ಕಾಲೇಜಿಗೆ ಮಂಜೂರಾಗಿರುವ ರೂಸಾ ಅನುದಾನದಲ್ಲಿ ಡೆಸ್ಕ್‌ಟಾಪ್ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ನಡೆಸಲಾದ ಇ–ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

**2025–ಸಿಂ–4.12(ಎ):** ವಿಶ್ವವಿದ್ಯಾಲಯಕ್ಕೆ 2 ಕಾರುಗಳನ್ನು ಖರೀದಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಮಾನ್ಯ ಕುಲಪತಿಯವರು ಉಪಯೋಗಿಸುತ್ತಿರುವ ಇನ್ನೋವಾ ಕ್ರಿಸ್ಟಾ ವಾಹನವು ಈಗಾಗಲೇ ಸುಮಾರು 3,45,000 ಕೀ.ಮಿ.ಗಳಿಗಿಂತ ಅಧಿಕ ಚಲಿಸಿದ್ದು, ಒಂದು ಹೊಸ INNOVA HYCROSS HYBRID 2X (7S), Platinum White Pearl ಕಾರನ್ನು ಸರ್ಕಾರದ GEM ಪೋರ್ಟ್‌ಲ್ ಮೂಲಕ ಖರೀದಿಸಲು ಉದ್ದೇಶಿಸಿದೆ. ಸದರಿ ಕಾರು ವಿದ್ಯುತ್ ಹಾಗೂ ಪೆಟ್ರೋಲ್ ಎರಡೂ ಇಂಧನಗಳಿಂದ ಚಲಿಸುವುದಾಗಿದ್ದು, ಕಾರು ಚಾಲನೆಯಲ್ಲಿರುವಾಗಲೇ ಛಾರ್ಜ್ ಅಗುತ್ತದೆ. ಸುಮಾರು ರೂ.40.00 ಲಕ್ಷಗಳಿಗಿಂತ ಅಧಿಕ ಮೌಲ್ಯದ ಸದರಿ ಕಾರನ್ನು GEM ಪೋರ್ಟ್‌ಲ್ ಮೂಲಕ ಅಂದಾಜು ರೂ.31.00 ಲಕ್ಷಗಳಿಗೆ ಖರೀದಿಸಲಾಗುತ್ತಿದೆ. ವಿದ್ಯುತ್ ಹಾಗೂ ಪೆಟ್ರೋಲ್ ಎರಡೂ ಇಂಧನಗಳಿಂದ ಚಲಿಸುವುದರಿಂದ ಇದು ಇಂಧನ ಮಿತವ್ಯಯ ವಾಹನವಾಗಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಮುಂದುವರೆದು ಮಾತನಾಡಿದ ಅವರು, ಕುಲಸಚಿವರು (ಆಡಳಿತ)ರವರು ಉಪಯೋಗಿಸುತ್ತಿರುವ ಟಾಟಾ ಹೆಕ್ಸಾ ವಾಹನವು ಇತ್ತೀಚೆಗೆ ಪದೇ ಪದೇ ರಿಪೇರಿಗೆ ಬರುತ್ತಿದ್ದು, ದುರಸ್ತಿಯ ವೆಚ್ಚವು ಅಧಿಕವಾಗುತ್ತಿದೆ. ಪ್ರಸ್ತುತ ಸದರಿ ವಾಹನದ ಉತ್ಪಾದನೆಯನ್ನು ಕಂಪನಿಯವರು ನಿಲ್ಲಿಸಿರುವುದರಿಂದ ಅದರ ಬಿಡಿಭಾಗಗಳು ಕೂಡ ಸರಿಯಾಗಿ ಸಿಗುತ್ತಿಲ್ಲ. ಆದುದರಿಂದ ಕುಲಸಚಿವ (ಆಡಳಿತ)ರವರ ಉಪಯೋಗಕ್ಕಾಗಿ ಒಂದು ಇನ್ನೋವಾ ಕಾರನ್ನು ಖರೀದಿಸಬೇಕಾಗಿದೆ. ಆದುದರಿಂದ ಎರಡು ಕಾರುಗಳನ್ನು ಖರೀದಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಮಾನ್ಯ ಕುಲಪತಿಯವರ ಉಪಯೋಗಕ್ಕಾಗಿ INNOVA HYCROSS HYBRID 2X (7S) ಕಾರನ್ನು ಮತ್ತು ಕುಲಸಚಿವ (ಆಡಳಿತ) ಇವರ ಉಪಯೋಗಕ್ಕಾಗಿ ಇನ್ನೋವಾ ಕಾರನ್ನು ಖರೀದಿಸಲು ಸಭೆಯು ಅನುಮತಿಸಿತು.

## ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ

**2025–ಸಿಂ–4.13:** ಡಾ.ರವಿಕುಮಾರ್ ಎಂ. ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಲು ಅನುಮತಿ ಹಾಗೂ ಪ್ರಯಾಣ/ದಿನಭತ್ಯೆಯನ್ನು ಮತ್ತು ಸಮ್ಮೇಳನದ ನೋಂದಣಿ ಶುಲ್ಕ ಪಾವತಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಕಂಪ್ಯೂಟರ್ ಸೈನ್ಸ್ ಮತ್ತು ಎಂ.ಸಿ.ಎ. ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ ಡಾ.ರವಿಕುಮಾರ್ ಎಂ. ರವರು School of Engineering & IT, Manipal Academy of Higher Education, Dubai, UAE ಇಲ್ಲಿ ದಿನಾಂಕ:07–04–2025 ಮತ್ತು 08–04–2025ರಂದು ನಡೆದ 2nd International Conference on Data Science & Exploration in Artificial Inteligence ದಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಲು ಹಾಗೂ ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯ ಅನುಸಾರ ಯು.ಜಿ.ಸಿ. ನಿಯಮಗಳಡಿ ಪರಿಶೀಲಿಸಿ, ಪ್ರಯಾಣ/ದಿನಭತ್ಯೆಯ ಶೇ.50 ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50 ರಷ್ಟು ಅಥವಾ ಗರಿಷ್ಠ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮಂಜೂರಾತಿ ನೀಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025–ಸಿಂ–4.14:** Environmental Management and Policy Research Institute EMPRI Bengaluru, ಈ ಸಂಸ್ಥೆಯೊಂದಿಗೆ ಸ್ನಾತಕೋತ್ತರ ಪರಿಸರ ಅಧ್ಯಯನ ವಿಭಾಗ ಒಡಂಬಡಿಕೆ ಮಾಡಿಕೊಂಡಿರುವ ಕುರಿತು.

ವಿಶ್ವವಿದ್ಯಾಲಯದ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರಾದ ಡಾ. ಯೋಗೇಂದ್ರ ಇವರು Environmental Management and Policy Research Institute EMPRI Bengaluru, an autonomous institute under the Department of Forest Ecology and Environment, Govt. of Karnataka for which undertakes applied and policy research and provides capacity building trainings on concurrent environmental issues relevant to the society has its office at Doresanipalya Forest Campus Vinayakanagara Circle J.P. Nagar 5th Phase, Bengaluru – 560078 - ಸಹಭಾಗಿತ್ವದಲ್ಲಿ ಅರಣ್ಯ ಜೀವಶಾಸ್ತ್ರದ ಸಂಶೋಧನೆ ನಡೆಸಲು ಹಾಗೂ ಅರಣ್ಯ ಇಲಾಖೆಗೆ ಮರಗಿಡಗಳ ಸಂರಕ್ಷಣೆ ಮತ್ತು ನಿರ್ವಹಣೆ,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ವನ್ಯಜೀವಿಗಳ ಸಂರಕ್ಷಣೆ, ಮಾಲಿನ್ಯ ನಿಯಂತ್ರಣ, ಹವಮಾನ ವೈಪರಿತ್ಯದ ಪರಿಣಾಮಗಳು, ಜೈವಿಕತಂತ್ರಜ್ಞಾನ ಮತ್ತು ಜೀವವೈವಿದ್ಯತೆ ಕುರಿತು ವೈಜ್ಞಾನಿಕ, ಶೈಕ್ಷಣಿಕ ಮತ್ತು ತಾಂತ್ರಿಕ ಮಾಹಿತಿ ಹಂಚಿಕೊಳ್ಳಲು, ಪರಸ್ಪರ ಸಹಭಾಗಿತ್ವದಲ್ಲಿ ಸಂಶೋಧನೆಯ ಅವಕಾಶಗಳನ್ನು ಬಳಸಿಕೊಳ್ಳಲು, ಜೀವಶಾಸ್ತ್ರ, ಸಮಾಜ ವಿಜ್ಞಾನ ಮತ್ತು ಇತರ ಅಂತರಶಿಸ್ತಿಯ ವಿಷಯಗಳಲ್ಲಿ ವಿಶೇಷ ಉಪನ್ಯಾಸ/ಸಮ್ಮೇಳನ/ಕಾರ್ಯಾಗಾರ ಮತ್ತು ಕಮ್ಮಟಗಳನ್ನು ನಡೆಸಲು ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಮತ್ತು ಅಧ್ಯಾಪಕರನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಸಂಶೋಧನಾ ಜಂಟಿ ಸಹಭಾಗಿತ್ವದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು Environmental Management and Policy Research Institute EMPRI Bengaluru ಈ ಸಂಸ್ಥೆಯೊಂದಿಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಒಡಂಬಡಿಕೆ ಮಾಡಿಕೊಂಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025–ಸಿಂ–4.15:** ಡಾ. ರಾಜೇಶ್ವರ ಅಚೂರ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ –ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಕುರಿತು.

ಡಾ. ರಾಜೇಶ್ವರ ಅಚೂರು, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ – ಇವರು "Bill and Melinda Gates Foundation Global Health Travel Award"ಗೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ Washington, DC, USA ಇಲ್ಲಿ ಆಯೋಜಿಸಿರುವ "GI Vaccinology: Horizons Across Disease, Demography and Technology" Conference ನಲ್ಲಿ ಪ್ರಶಸ್ತಿ ಸ್ವೀಕರಿಸುವ ಸಲುವಾಗಿ ಹೋಗಿಬರಲು ದಿನಾಂಕ:30–05–2025 ರಿಂದ 10–06–2025 ರವರೆಗೆ ಅನ್ಯಕಾರ್ಯನಿಮಿತ್ತ ಮಂಜೂರು ಮಾಡಲು ಮತ್ತು ಮುಂದುವರೆದಂತೆ ವಿದೇಶದಲ್ಲಿ ನೆಲೆಸಿರುವ ತಮ್ಮ ಕುಟುಂಬದ ಸದಸ್ಯರನ್ನು ಭೇಟಿ ಮಾಡುವ ಸಲುವಾಗಿ ದಿನಾಂಕ:11–06–2025 ರಿಂದ 24–06–2025 ರವರೆಗೆ HPL ರಜೆಯನ್ನು ಭತ್ಯೆ ರಹಿತವಾಗಿ ಮಂಜೂರು ಮಾಡಲು ಸಭೆಯು ಅನುಮತಿಸಿತು.

## ಶೈಕ್ಷಣಿಕ ವಿಭಾಗ

**2025–ಸಿಂ–4.16:** "Senior Prof. V. Krishna Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ Research Scholars of Senior Prof. V. Krishna, Dept. of Biotechnology, Kuvempu University ಇವರು ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಜೈವಿಕತಂತ್ರಜ್ಞಾನ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "Senior Prof. V. Krishna Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವದಿಂದ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಸರ್ವಾನುಮತದಿಂದ ಅಭಿನಂದಿಸಿತು.

## ಪ್ರಾಧಿಕಾರಗಳ ವಿಭಾಗ

**2025–ಸಿಂ–4.17:** ಕರ್ನಾಟಕ ರಾಜ್ಯ ಗ್ರಂಥಾಲಯಗಳ ಕಾಯ್ದೆ 1965ರನ್ವಯ ರಾಜ್ಯ ಗ್ರಂಥಾಲಯ ಪ್ರಾಧಿಕಾರವನ್ನು ರಚಿಸಲು ಸಿಂಡಿಕೇಟ್ ಸದಸ್ಯರ ನಾಮನಿರ್ದೇಶನ ಮಾಡುವ ಕುರಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ನಿರ್ಣಯ: ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ:ಇಡಿ 156 ಯುಎನ್‌ಇ 2025, ದಿನಾಂಕ:29-04-2025 ರಲ್ಲಿನ ಸೂಚನೆಯ ಮೇರೆಗೆ ಮೇರೆಗೆ ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಪ್ರೊ. ಸಾಕಮ್ಮ, ಬಿ. ಇವರ ಹೆಸರನ್ನು ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2025-ಸಿಂ-4.18:** 2024-25ನೇ ಸಾಲಿಗೆ ಎ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಮಗಳೂರು ಮುಂದುವರಿಕೆ ಸಂಯೋಜನೆಗೆ ಅನುಮತಿ ನೀಡುವ ಬಗ್ಗೆ.

ನಿರ್ಣಯ: ಚಿಕ್ಕಮಗಳೂರಿನ ಎ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯದ 2024-25ನೇ ಸಾಲಿನ ಮುಂದುವರಿಕೆ ಸಂಯೋಜನೆಗೆ ಸಂಬಂಧಪಟ್ಟಂತೆ, ದಿನಾಂಕ:15-01-2025 ರಂದು ಸ್ಥಳೀಯ ತಪಾಸಣಾ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಸಲ್ಲಿಸಿದ್ದ ವರದಿಯನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಕಾಲೇಜಿನ ಸ್ಥಳ ಬದಲಾವಣೆಗೆ ಅನುಮತಿ ನೀಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2025-ಸಿಂ-4.19:** ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜನ್ನು 2025-26ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸುವ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ, ಎ.ವಿ.ಎಸ್. ಎಜುಕೇಷನ್ ಟ್ರಸ್ಟ್ ಇವರು ಚಿಕ್ಕಮಗಳೂರಿನಲ್ಲಿ ಇನ್ಫಿನಿಟಿ ಅಜೇಶ್ ಸಂಹಿತ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜನ್ನು 2025-26ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ ಕೋರಿ ಅರ್ಜಿ ಸಲ್ಲಿಸಿದ್ದರಿಂದ, ಸ್ಥಳೀಯ ತಪಾಸಣಾ ಸಮಿತಿಯು ಭೇಟಿ ನೀಡಿ ಹೊಸ ಕಾಲೇಜು ಪ್ರಾರಂಭಿಸಲು ಅಗತ್ಯ ಮೂಲ ಸೌಕರ್ಯಗಳು ಇಲ್ಲದೇ ಕೇವಲ 28.15 ಅಂಕಗಳನ್ನು ಪಡೆದಿರುವ ಕಾರಣ (ಕನಿಷ್ಟ 45 ಅಂಕಗಳನ್ನು ಪಡೆಯುವುದು ಕಡ್ಡಾಯ) ಸಂಯೋಜನೆಗೆ ಶಿಫಾರಸ್ಸು ಮಾಡಿರಲಿಲ್ಲ. ಸಂಯೋಜನಾ ವರದಿಯನ್ನು ದಿನಾಂಕ:07-03-2025 ರಂದು ನಡೆದ ಸಿಂಡಿಕೇಟ್ ಮತ್ತು ದಿನಾಂಕ:25-03-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯು ಅನುಮೋದಿಸಿದ್ದು, ನವೀನ ಸಂಯೋಜನೆಯನ್ನು ತಿರಸ್ಕರಿಸಲಾಗಿದೆ ಎಂದು ಕಾಲೇಜಿಗೆ ಆದೇಶ ನೀಡಲಾಗಿತ್ತು ಮತ್ತು ಸರ್ಕಾರಕ್ಕೆ ಮಾಹಿತಿ ನೀಡಲಾಗಿತ್ತು.

ಪ್ರಸ್ತುತ ವಿಶ್ವವಿದ್ಯಾಲಯಕ್ಕೆ ಬರೆದಿರುವ ಸರ್ಕಾರದ ಪತ್ರ ಸಂಖ್ಯೆ: ಇಡಿ 40 ಯುಎಸ್‌ವಿ 2025, ದಿನಾಂಕ:15-05-2025ರಲ್ಲಿ "2025-26ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಬಿ.ಸಿ.ಎ., ಬಿ.ಎಸ್ಸಿ. ಮತ್ತು ಬಿ.ಸಿ.ಎ. ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ವಿಶ್ವವಿದ್ಯಾಲಯವು ಶಿಫಾರಸ್ಸು ಮಾಡಿರುವುದನ್ನು ಮತ್ತು ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡದಿರುವುದನ್ನು ಪ್ರಸ್ತಾವನೆಯಲ್ಲಿ ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಕಾಲೇಜು 2025-26ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ., ಬಿ.ಸಿ.ಎ., ಬಿ.ಎಸ್ಸಿ., ಮತ್ತು ಬಿ.ಬಿ.ಎ., ಕೋಸ್‌ಗಳೊಂದಿಗೆ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲು ಪರಿಷ್ಕೃತ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಿ, ಸರ್ಕಾರಕ್ಕೆ 7 ದಿನಗಳೊಳಗೆ ವರದಿಯನ್ನು ಸಲ್ಲಿಸುವಂತೆ" ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

ನಿರ್ಣಯ: ಚರ್ಚೆಯ ನಂತರ ಎ.ವಿ.ಎಸ್. ಎಜುಕೇಷನ್ ಟ್ರಸ್ಟ್ ಇವರು ಚಿಕ್ಕಮಗಳೂರಿನಲ್ಲಿ ಇನ್ಫಿನಿಟಿ ಅಜೇಶ್ ಸಂಹಿತ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜನ್ನು 2025-26ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ., ಬಿ.ಸಿ.ಎ., ಬಿ.ಎಸ್ಸಿ., ಮತ್ತು ಬಿ.ಬಿ.ಎ., ಕೋರ್ಸ್‌ಗಳೊಂದಿಗೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಹೊಸದಾಗಿ ಪ್ರಾರಂಭಿಸುವ ಬಗ್ಗೆ ಕಾಲೇಜಿನಿಂದ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು, ಮತ್ತೊಮ್ಮೆ ಪರಿಷ್ಕೃತ ಸ್ಥಳೀಯ ವಿಚಾರಣಾ ಸಮಿತಿಯನ್ನು ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

**2025–ಸಿಂ–4.20:** **ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

**ದಿನಾಂಕ:07–03–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯ ಮತ್ತು ದಿನಾಂಕ:15–05 2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಸದಸ್ಯರುಗಳಿಂದ ಬಂದ ಪ್ರಸ್ತಾವನೆಗಳು**

**2025–ಸಿಂ–4.20.1:** **ಶ್ರೀ ಕೆ.ಪಿ. ಶ್ರೀಪಾಲ್**

**2025–ಸಿಂ–4.20.1(ಎ):** ಶ್ರೀ ಎಂ. ಚಂದ್ರಕಾಂತ್, ಸಹಾಯಕ ಕುಲಸಚಿವ– ಇವರ ನೇಮಕ–ಬಡ್ತಿಗೆ ಸಂಬಂಧಪಟ್ಟಂತೆ ಹಾಗೂ ಸರ್ಕಾರದ ಪತ್ರಗಳ ಮೇಲೆ ಕ್ರಮ ಕೈಗೊಳ್ಳುವಂತೆ ಹಿಂದಿನ ಸಭೆಯಲ್ಲಿ ಚರ್ಚೆ ನಡೆದಿದ್ದು, ಸದರಿ ವಿಷಯವು ಕೂಡ ಹಿಂದಿನ ಸಭೆಯ ನಡಾವಳಿಯಲ್ಲಿ ಸರಿಯಾಗಿ ದಾಖಲಾಗಿರುವುದಿಲ್ಲ. ಹಿಂದಿನ ಸಭೆಯಲ್ಲಿ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಮಾಹಿತಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯವಾಗಿದ್ದರೂ, ಈ ಸಭೆಯ ನಿರ್ಣಯದ ವಿರುದ್ಧ ಬಡ್ತಿ ಹಾಗೂ ವೇತನ ನಿಗದೀಕರಣವನ್ನು ನಿಯಮಬಾಹಿರವಾಗಿ ಆದೇಶ ಹೊರಡಿಸಲಾಗಿದೆ. ಈ ಬಗ್ಗೆ ದಾಖಲೆಗಳನ್ನು ಸಭೆಯ ಮುಂದಿಟ್ಟು ಚರ್ಚೆಯಾಗಬೇಕು.

ಮುಂದುವರೆದು ಮಾತನಾಡಿದ ಶ್ರೀ ಕೆ.ಪಿ. ಶ್ರೀಪಾಲ್ ರವರು, ಶ್ರೀ ಎಂ. ಚಂದ್ರಕಾಂತ್ ರವರನ್ನು 2006 ರಿಂದಲೇ ಸಹಾಯಕ ಕುಲಸಚಿವ ಹುದ್ದೆಗೆ ಪರಿಗಣಿಸುವುದಾದಲ್ಲಿ ಅದೇ ರೀತಿ ಶ್ರೀಮತಿ ಸುಮನ್ ಎ. ಆಚಾರ್, ಸಹಾಯಕ ಕುಲಸಚಿವ ರವರನ್ನು ಕೂಡ ದಿನಾಂಕ:08–01–2007 ರಿಂದಲೇ ಪೂರ್ವಾನ್ವಯವಾಗುವಂತೆ ಪರಿಗಣಿಸಿರಿ. ಇಲ್ಲವಾದಲ್ಲಿ ಅವರಿಗೆ ಅನ್ಯಾಯವಾಗುತ್ತದೆ ಹಾಗೂ ನೌಕರರಲ್ಲಿಯೇ ತಾರತಮ್ಯ ಎಸಗಿದಂತಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ, ಶ್ರೀ ಚಂದ್ರಕಾಂತ ಎಂ. ಇವರ ಸಹಾಯಕ ಕುಲಸಚಿವ ಹುದ್ದೆಯ ಬಡ್ತಿಗೆ ಸಂಬಂಧಪಟ್ಟ ಅರ್ಹತಾ ದಿನಾಂಕವನ್ನು ಪರಿಷ್ಕರಿಸಿ ದಿನಾಂಕ:06–11–2024 ರಂದು ಆದೇಶ ಹೊರಡಿಸಲಾಗಿದೆ. ಆದರೆ, ಸದರಿ ಆದೇಶವನ್ನು ಆಕ್ಷೇಪಿಸಿ, 3 ಸಹಾಯಕ ಕುಲಸಚಿವರು ಆಕ್ಷೇಪಣೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯ ಬಗ್ಗೆ ವಿಚಾರಣೆ ನಡೆಸಿದೆ. ಕೆ.ಸಿ.ಎಸ್.ಆರ್. ನಿಯಮಗಳಡಿಯಲ್ಲಿ ಪರಿಶೀಲಿಸಿ ಈ ಬಗ್ಗೆ ಆದೇಶ ಹೊರಡಿಸಲಾಗುವುದು ಹಾಗೂ ಶ್ರೀಮತಿ ಸುಮನ್ ಎ. ಆಚಾರ್ ಸಹಾಯಕ ಕುಲಸಚಿವರು ಇವರ ಮನವಿಯನ್ನು ಸಹ ಪರಿಗಣಿಸಲಾಗುವುದು ಎಂದರು.

**2025–ಸಿಂ–4.20.1(ಬಿ):** ವಿಶ್ವವಿದ್ಯಾಲಯದ ಅಧ್ಯಾಪಕೇತರ ನೌಕರರು ತಮ್ಮ ಸೇವಾ ಬಡ್ತಿ ಸಂಬಂಧ ಧರಣಿ ನಡೆಸಿದ ಪ್ರಯುಕ್ತ ದಿನಾಂಕ:19–11–2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚೆ ನಡೆದು, ನೌಕರರುಗಳ ಬೇಡಿಕೆಯ ಸಂಬಂಧ ಸಂಘದ ಪದಾಧಿಕಾರಿಗಳು ಹಾಗೂ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡಂತೆ ಒಂದು ವಾರದೊಳಗೆ ಸಭೆ ಕರೆದು ನೌಕರರ ಬೇಡಿಕೆಯ ಬಗ್ಗೆ ಕ್ರಮಕೈಗೊಳ್ಳುವ ಬಗ್ಗೆ ನಿರ್ಣಯಿಸಲಾಗಿತ್ತು. ಈ ವಿಷಯ ಹಿಂದಿನ ಸಭೆಯ ನಡಾವಳಿಯಲ್ಲಿ ದಾಖಲಾಗಿರುವುದಿಲ್ಲ ಮತ್ತು ಸಭೆಯ ತೀರ್ಮಾನದಂತೆ ಯಾವುದೇ ಕ್ರಮ ಜರುಗಿಸದೆ ಕುಲಸಚಿವರು ತಮ್ಮ ಸರ್ವಾಧಿಕಾರಿ ಧೋರಣೆಯಿಂದ ನೌಕರರನ್ನು ಕೆಲಸದಿಂದ ವಜಾಗೊಳಿಸಿ, ವರ್ಗಾವಣೆ ಮಾಡಿದ್ದು, ನಂತರದಲ್ಲಿ ಈ ಸಂಬಂಧ ನ್ಯಾಯಾಲಯದಲ್ಲಿ ನಡೆದ ಪ್ರಕರಣ ಮತ್ತು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

2025-20-4.

ನೇಮಿಸಿಕೊಂಡ ವಕೀಲರ ವಿವರ, ವಕೀಲರ ಶುಲ್ಕ ಕೇವಿಯಟ್ ದಾಖಲಿಸಿದ್ದು, ಇವೆಲ್ಲದರ ಬಗೆಗಿನ ದಾಖಲೆಗಳೊಂದಿಗೆ ನಡೆದ ವಿಷಯಗಳಿಗೆ ಸಂಬಂಧಿಸಿದ ದಾಖಲೆ ಹಾಜರುಪಡಿಸಿ ಚರ್ಚಿಸುವುದು.

ಅಧ್ಯಾಪಕೇತರ ನೌಕರರ ಬಡ್ತಿಗೆ ಸಂಬಂಧಿಸಿದಂತೆ ಆಡಳಿತಾಂಗವು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದು, ನೌಕರರು ದಿನಾಂಕ:19-11-2024 ರಂದು ಧರಣಿ ನಡೆಸದಂತೆ ಪತ್ರಿಸಲಾಗಿತ್ತು. ಧರಣಿಗೆ ಅನುಮತಿ ನಿರಾಕರಿಸಿದ್ದರೂ ಕೂಡ ಧರಣಿ ಕೈಗೊಂಡ ಪ್ರಯುಕ್ತ ಮತ್ತು ವಿಶ್ವವಿದ್ಯಾಲಯದ ಆಡಳಿತ ತೆಗೆದುಕೊಳ್ಳುವ ಕ್ರಮ/ ಹೊರಡಿಸುವ ಪತ್ರ/ಸುತ್ತೋಲೆ/ಆದೇಶ ಮುಂತಾದುವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸುವುದು/ ಚರ್ಚಿಸುವುದು/ಟೀಕಿಸುವುದು/ವಿಮರ್ಶೆ ಮಾಡುವುದು ವಿಶ್ವವಿದ್ಯಾಲಯದ ಘನತೆಗೆ ಧಕ್ಕೆ ತರುವಂತಾಗಿದ್ದು, ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಅಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಿದ್ದಾಗ್ಯೂ ಕುವೆಂಪು ವಿಶ್ವವಿದ್ಯಾಲಯದ ನೌಕರರ ವಾಟ್ಸ್‌ಪ್ ಗ್ರೂಪ್‌ನಲ್ಲಿ ಆಡಳಿತಾಂಗದ ಆದೇಶ/ಕ್ರಮಗಳನ್ನು ಟೀಕೆ ಮಾಡಿರುವುದು ಸುತ್ತೋಲೆಯ ಉಲ್ಲಂಘನೆಯಾಗಿರುವುದರಿಂದ ಹಾಗೂ ಕೆ.ಸಿ.ಎಸ್.ಆರ್.' ನಿಯಮ 2021 ನಿಯಮ 11ರ ಸ್ಪಷ್ಟ ಉಲ್ಲಂಘನೆಯಾಗಿದ್ದರಿಂದ ಒಬ್ಬ ನೌಕರರನ್ನು ಅಮಾನತ್ತುಗೊಳಿಸಲಾಗಿತ್ತು. ನಂತರ ನ್ಯಾಯಾಲಯದ ಆದೇಶದಂತೆ ಸದರಿಯವರನ್ನು ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ವರ್ಗಾವಣೆ ಮಾಡಲಾಗಿದೆ. ಯಾವುದೇ ನೌಕರರನ್ನು ಕೆಲಸದಿಂದ ವಜಾಗೊಳಿಸಿರುವುದಿಲ್ಲ.

ರಿಟ್ ಪಿಟಿಷನ್ ಸಂಖ್ಯೆ:33529/2024 (ಎಸ್.ಆರ್.ಇ.ಎಸ್) ಈ ಪ್ರಕರಣದಲ್ಲಿ ಹೈಕೋರ್ಟ್‌ನ ಹಿರಿಯ ವಕೀಲರಾದ ಶ್ರೀ ಡಿ.ಎಲ್.ಎನ್.ರಾವ್ ಅವರನ್ನು ನೇಮಿಸಲಾಗಿದೆ. ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕುವಿ:ಮಾಸನಿ-5:4931:2023-24 ದಿನಾಂಕ:30-03-2024 ರಲ್ಲಿ Fee to the Senior Advocate in the High Court: "The Vice Chancellor is authorized to fix fee to the Senior Advocates whenever such services are undertaken in the interest of University" ಎಂದು ಆದೇಶಿಸಲಾಗಿದ್ದು, ಅದರಂತೆ ಹೈಕೋರ್ಟ್‌ನ ಹಿರಿಯ ವಕೀಲರಾದ ಶ್ರೀ.ಡಿ.ಎಲ್.ಎನ್.ರಾವ್ ಇವರು ಸದರಿ ಮೊಕದ್ದಮೆಗಾಗಿ ದಿನಾಂಕ:13-12-2024 ರಂದು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಹಾಜರಾಗಿ ವಾದ ಮಂಡಿಸಿದ ಸಂಬಂಧ ರೂ.3,50,000/- (ರೂಪಾಯಿ ಮೂರು ಲಕ್ಷದ ಐವತ್ತು ಸಾವಿರ ಮಾತ್ರ) ಗಳ ಶುಲ್ಕ ಪಾವತಿಸಲಾಗಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

ಕುಲಸಚಿವರು ಮಾತನಾಡಿ, ಕೆಲವು ನೌಕರರು ವಿಶ್ವವಿದ್ಯಾಲಯದ ಆದೇಶಗಳು ಮತ್ತು ನಿರ್ಣಯಗಳನ್ನು ಸಾರ್ವಜನಿಕವಾಗಿ ವಾಟ್ಸಪ್‌ಗಳಲ್ಲಿ ಟೀಕಿಸುತ್ತಾರೆ ಮತ್ತು ಕಮೆಂಟ್ ಮಾಡುತ್ತಾರೆ. ಇದು ತಪ್ಪು. ಅಮಾನತ್ತು ಮಾಡಲಾದ ಉದ್ಯೋಗಿಯು ಅಧಿಕಾರಿಗಳು ಹಾಗೂ ವಿಶ್ವವಿದ್ಯಾಲಯದ ವಿರುದ್ಧ ನೇರವಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುತ್ತಾರೆ. ನಿಯಮಗಳಲ್ಲಿ ಈ ರೀತಿ ನೌಕರರು ಸರ್ಕಾರಕ್ಕೆ ಹಾಗೂ ಮಂತ್ರಿಗಳಿಗೆ ನೇರವಾಗಿ ಪತ್ರ ಬರೆಯಲು ಅವಕಾಶವಿರುವುದಿಲ್ಲ. ನೌಕರರ ಇಂತಹ ಕಾನೂನುಬಾಹಿರ ನಡವಳಿಕೆಗಳನ್ನು ನಿಯಂತ್ರಿಸದಿದ್ದರೆ, ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿ ದೃಷ್ಟಿಯಿಂದ ಆಡಳಿತ ನಡೆಸುವುದು ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕಛೇರಿಯ ಕೆಲವು ದಾಖಲೆಗಳು ಆರ್.ಟಿ.ಐ. ಮೂಲಕ ಹೊರತುಪಡಿಸಿ ಬೇರೆ ಮಾರ್ಗದಿಂದ ಕೂಡ ಹೊರಹೋಗುತ್ತಿರುವುದು ಗಮನಕ್ಕೆ ಬಂದಿದೆ. ಪರಿಶೀಲಿಸಿ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

2025–ಸಿಂ–4.20.1(ಸಿ): ಅಧ್ಯಾಪಕೇತರ ನೌಕರರ ಬಡ್ತಿ ಹಾಗೂ ಸೇವಾ ಸೌಲಭ್ಯ ಸಂಬಂಧ ವಿಶ್ವವಿದ್ಯಾಲಯವು ಕೈಗೊಂಡ ಕ್ರಮಗಳೇನು? ನೌಕರರ ಬೇಡಿಕೆ ಸಂಬಂಧ ಸಂಘದ ಸದಸ್ಯರುಗಳ ಹಾಗೂ ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡಂತೆ ಸಭೆ ಕರೆಯಲಾಗಿದೆಯೇ ಇಲ್ಲವಾದಲ್ಲಿ ಸಭೆ ಕರೆಯದಿರುವ ಬಗ್ಗೆ ಕಾರಣವೇನು ಎಂಬುವುದರ ಬಗ್ಗೆ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯವಾಗಲಿ.

ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆ ನಿಯಮಗಳ ಅಡಿಯಲ್ಲಿ ಡಿ.ಪಿ.ಸಿ. ಮೂಲಕ ಅರ್ಹ ನೌಕರರಿಗೆ ಜೇಷ್ಠತೆ ಹಾಗೂ ರೋಸ್ಟರ್ ಪರಿಗಣಿಸಿ ಬಡ್ತಿ ನೀಡಲಾಗಿದ್ದು, ವೇತನ ನಿಗದೀಕರಣ ಕೂಡ ಮಾಡಲಾಗಿದೆ. ಉಪಕುಲಸಚಿವ ಹುದ್ದೆಗೆ ಮಾತ್ರ ಬಡ್ತಿ ನೀಡುವುದು ಬಾಕಿ ಇದ್ದು, ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂಬ ಮಾಹಿತಿಯನ್ನು ಒದಗಿಸಲಾಯಿತು.

2025–ಸಿಂ–4.20.1(ಡಿ): ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕೇತರ ನೌಕರರ ಆಂತರಿಕ/ ವರ್ಗಾವಣೆ ಸಂಬಂಧ ಅನುಸರಿಸುತ್ತಿರುವ ಮಾನದಂಡವೇನು? ಅಲ್ಲದೆ ವರ್ಗಾವಣೆಗೊಂಡ ನೌಕರರುಗಳನ್ನೇ ಪುನ: ಪುನ: ವರ್ಗಾವಣೆಗೊಳಿಸುತ್ತಿರುವ ಕಾರಣವೇನು? ಕೆಲವು ಸಿಬ್ಬಂದಿಗಳು ಒಂದೇ ವಿಭಾಗದಲ್ಲಿ ಕಳೆದ 10, 15 ಹಾಗೂ 20 ವರ್ಷವಿದ್ದರೂ ಅವರುಗಳನ್ನು ವಿಶ್ವವಿದ್ಯಾಲಯವು ಆಂತರಿಕ ವರ್ಗಾವಣೆ/ ಬದಲಾವಣೆ ಮಾಡದಿರಲು ಕಾರಣವೇನು? ಈ ಬಗ್ಗೆ ವಿವರವಾದ ಮಾಹಿತಿಯೊಂದಿಗೆ ಚರ್ಚೆ ನಡೆಯಬೇಕು.

ಶ್ರೀ ಕೆ.ಪಿ.ಶ್ರೀಪಾಲ್ ರವರು ಮುಂದುವರೆದು, ಮಾತನಾಡಿ, ಮೂರು ವರ್ಷ ಒಂದೇ ವಿಭಾಗದಲ್ಲಿ ಇದ್ದವರನ್ನು ಬದಲಾಯಿಸಿ. ಹೆಚ್.ಆರ್.ಎಂ. ವಿಭಾಗದಲ್ಲಿ ಕೆಲವು ನೌಕರರು ಬಹಳ ವರ್ಷಗಳಿಂದ ಇದ್ದಾರೆ. ಕೆಲವರು 30 ವರ್ಷಗಳಿಂದ ಒಂದೇ ಸ್ಥಳದಲ್ಲಿದ್ದಾರೆ. ಅವರಿಗೆ ಬೇರೆಡೆ ಕಾರ್ಯ ನಿರ್ವಹಿಸುವ ಅವಕಾಶ ಸಿಗುತ್ತಿಲ್ಲ ಎಂದರು. ಶ್ರೀ ಶಶಿಧರ್ ಬಿ.ಎನ್., ಶ್ರೀ ಲಕ್ಮೀಕಾಂತ ಚಿಮನೂರು ಸೇರಿದಂತೆ ಎಲ್ಲಾ ಸದಸ್ಯರು 3 ವರ್ಷಕ್ಕಿಂತ ಹೆಚ್ಚಿನ ಕಾಲ ಒಂದೇ ವಿಭಾಗದಲ್ಲಿರುವವರನ್ನು ಬದಲಾಯಿಸಬೇಕು ಎಂದರು. ಡಾ.ಮಧು ರವರು ಮಾತನಾಡಿ, ನೌಕರರ ವರ್ಗಾವಣೆಗಾಗಿ ಒಂದು ಸಮಿತಿ ಮಾಡಿ, ಸಮಿತಿಯ ಮೂಲಕ ವರ್ಗಾವಣೆ ಪ್ರಕ್ರಿಯೆ ನಡೆಸಿದಲ್ಲಿ ಆಡಳಿತದ ಮೇಲೆ ಒತ್ತಡ ಕಡಿಮೆಯಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ, ನೌಕರರ ವರ್ಗಾವಣೆಗೆ ವಿಶ್ವವಿದ್ಯಾಲಯ ರಚಿಸಿಕೊಂಡಿರುವ ಮಾರ್ಗದರ್ಶಿ ಸೂತ್ರ (ಗೈಡ್‌ಲೈನ್) ಮತ್ತು ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು. ಕೆಲವು ಅಸಾಧಾರಣ ಪ್ರಕರಣಗಳಲ್ಲಿ 1 ವರ್ಷಕ್ಕಿಂತ ಹೆಚ್ಚಿನ ಅವಧಿಯಿಂದ ಒಂದೇ ವಿಭಾಗದಲ್ಲಿರುವ ನೌಕರರನ್ನು ಅದೇ ವಿಭಾಗದಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಹೆಚ್ಚಿನ ಸಂಖ್ಯೆಯ ನೌಕರರನ್ನು ಒಂದೇ ಬಾರಿಗೆ ವರ್ಗಾಯಿಸಿದಲ್ಲಿ ಅನುಭವ ಇರುವವರ ಕೊರತೆಯಿಂದ ವಿಭಾಗಗಳ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ, ಇದನ್ನು ಕೂಡ ಗಮನಿಸಬೇಕಾಗುತ್ತದೆ. ವಿಶ್ವವಿದ್ಯಾಲಯದ ನಿಯಮಗಳಡಿ ಮತ್ತು ಸರ್ಕಾರದ ಮಾರ್ಗಸೂಚಿಗಳನ್ವಯ ವರ್ಗಾವಣೆ ಮಾಡಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.

2025–ಸಿಂ–4.20.1(ಇ): ವಿಶ್ವವಿದ್ಯಾಲಯವು ದೂರಶಿಕ್ಷಣ ಪ್ರವೇಶಾತಿಗೆ ಸಂಬಂಧಿಸಿದಂತೆ ಎಲ್.ಎಂ.ಎಸ್. ತಂತ್ರಾಂಶದ ಖರೀದಿಯ ಕುರಿತು ಚರ್ಚಿಸಿ ಅದರಲ್ಲಿ ಲೋಪಗಳಿರುವುದನ್ನು ತಿಳಿಸಲಾಗಿತ್ತು ಮತ್ತು ಈ ಬಗ್ಗೆ ತನಿಖೆ ನಡೆಸಲು ಸಮಿತಿ ರಚಿಸುವಂತೆ ನಿರ್ಣಯವಾಗಿರುತ್ತದೆ. ಆದರೆ ಈ ಕುರಿತಾಗಿ ಕಳೆದ ಸಭೆಯ ನಡಾವಳಿಯಲ್ಲಿ ತಪ್ಪಾಗಿ ದಾಖಲಿಸಲಾಗಿದ್ದು ಈ ಬಗ್ಗೆ ಇದುವರೆವಿಗೂ ಯಾವುದೇ ಕ್ರಮವನ್ನು ಜರುಗಿಸಿಲ್ಲ, ಯಾವ ಕಾರಣಕ್ಕಾಗಿ ವಿಳಂಬವಾಗಿದೆ ಮತ್ತು ಈ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿದ್ದೀರಿ ಎಂಬ ವಿವರದೊಂದಿಗೆ ಚರ್ಚೆ ಆಗಬೇಕು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ದಿನಾಂಕ:19–11–2024ರ ಸಿಂಡಿಕೇಟ್ ಸಭೆಯ ವಿಷಯ ಸಂ:2024–ಸಿಂ–5.01ರ ನಿರ್ಣಯದನುಸಾರ ಎಲ್.ಎಂ.ಎಸ್. ತಂತ್ರಾಂಶ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲನೆಗಾಗಿ ಮಾನ್ಯ ಕುಲಪತಿಗಳಿಂದ ವಿಶೇಷ ಮೇಲ್ವಿಚಾರಣಾ ಸಮಿತಿ ರಚನೆಗೊಂಡಿರುತ್ತದೆ. ಸದರಿ ಸಮಿತಿಯಲ್ಲಿನ ಒಬ್ಬ ಸದಸ್ಯರು, ಸಮಿತಿಯ ಸದಸ್ಯತ್ವದಿಂದ ವಿನಾಯಿತಿ ನೀಡುವಂತೆ ಕೋರಿ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಪತ್ರಿಸಿದ್ದರು. ಪ್ರಸ್ತುತ ಸಮಿತಿಗೆ ಶ್ರೀ ಮುಸಾವೀರ್ ಬಾಷಾ ರವರನ್ನು ಸೇರ್ಪಡೆಗೊಳಿಸಲು ನಿರ್ಣಯಿಸಲಾಗಿದ್ದು, ಅವರನ್ನು ಸೇರ್ಪಡೆಗೊಳಿಸಿ ಪರಿಷ್ಕೃತ ಸಮಿತಿಯನ್ನು ರಚಿಸಿ, ಆದಷ್ಟು ಬೇಗನೆ ವರದಿ ನೀಡುವುದಾಗಿ ಕುಲಸಚಿವರು ತಿಳಿಸಿದರು.

**2025–ಸಿಂ–4.20.1(ಎಫ್):** ಕಳೆದ ಸಿಂಡಿಕೇಟ್ ಸಭೆಯಲ್ಲಿ ದೂರಶಿಕ್ಷಣ ವಿಭಾಗದಲ್ಲಿ ಕೋಟ್ಯಾಂತರ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಬಾಕಿ ಉಳಿಸಿಕೊಂಡಿರುವ ಅಧ್ಯಯನ ಕೇಂದ್ರಗಳ ವಿರುದ್ಧ ಶುಲ್ಕ ವಸೂಲಾತಿ ಸಂಬಂಧ ಕ್ರಿಮಿನಲ್ ಮೊಕದ್ದಮ್ಮೆ ದಾಖಲಿಸುವಂತೆ ನಿರ್ಣಯವಾಗಿರುತ್ತದೆ. ಈ ಸಂಬಂಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆಯೇ? ಅಥವಾ ಇಲ್ಲವೇ? ಇಲ್ಲವಾದಲ್ಲಿ ಕಾರಣವೇನು?.

ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಡಾ.ಜಗನ್ನಾಥ ಕೆ. ಡಾಂಗೆ ರವರು ಮಾತನಾಡಿ, ದಿನಾಂಕ:19–07–2024ರ ಸಿಂಡಿಕೇಟ್ ಸಭೆಯ ವಿಷಯ ಸಂ:2024–ಸಿಂ–3.40(2ಬಿ)ರ ನಿರ್ಣಯದನುಸಾರ ಬಾಕಿ ಮೊತ್ತ ಪಾವತಿಸಬೇಕಾಗಿರುವ ಕೇಂದ್ರಗಳ ವಿರುದ್ಧ ಮೊಕದ್ದಮೆ ದಾಖಲಿಸುವುದಕ್ಕೂ ಮುನ್ನ ವಿಶ್ವವಿದ್ಯಾಲಯಕ್ಕೆ ಬಾಕಿ ಹಣ ಪಾವತಿಸುವಂತೆ ಸಂಬಂಧಪಟ್ಟ ಅಧ್ಯಯನ ಕೇಂದ್ರಗಳಿಗೆ ಅಂತಿಮವಾಗಿ ಪತ್ರಿಸಲಾಗಿದೆ. ಈ ಸಂಬಂಧ ಬಾಕಿ ಹಣ ಉಳಿಸಿಕೊಂಡಿರುವ 03 ಕೇಂದ್ರದವರು ನಿರ್ದೇಶಕರಿಗೆ ಬಾಕಿ ಮೊತ್ತ ಪಾವತಿಸುವುದಾಗಿ ದೂರವಾಣಿ ಮೂಲಕ ಸಮಯಾವಕಾಶ ಕೋರಿರುತ್ತಾರೆ. 05 ಕೇಂದ್ರದವರು ತಮ್ಮ ಕೇಂದ್ರದಿಂದ ಯಾವುದೇ ಬಾಕಿ ಹಣ ಪಾವತಿ ಇರುವುದಿಲ್ಲ. ಸಂಬಂಧಿಸಿದ ಪಾವತಿ ದಾಖಲೆಗಳು ನಮ್ಮಲ್ಲಿದ್ದು, ವಿಶ್ವವಿದ್ಯಾಲಯವೇ ನಮ್ಮ ಕೇಂದ್ರಕ್ಕೆ ಷೇರುಮೊತ್ತ ಪಾವತಿಸಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಈ ಕುರಿತು ಪರಿಶೀಲಿಸಲಾಗಿ 05 ಅಧ್ಯಯನ ಕೇಂದ್ರಗಳಿಂದ ಬಾಕಿ ಇರುವುದು ಕಂಡುಬಂದಿರುವುದಿಲ್ಲ. ಉಳಿದಂತೆ 05 ಕೇಂದ್ರಗಳಿಂದ ವಿಶ್ವವಿದ್ಯಾಲಯಕ್ಕೆ ಶುಲ್ಕ ಬಾಕಿ ಇರುತ್ತದೆ. ಈ ವಿಷಯವನ್ನು ದಿನಾಂಕ:01–02–2025 ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಬಾಕಿ ಹಣ ಉಳಿಸಿಕೊಂಡಿರುವ ಕೇಂದ್ರಗಳ ಮಾಲೀಕರ ವಿರುದ್ಧ ಮೊಕದ್ದಮೆ ದಾಖಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ಕೋರ್ಟಿಗೆ ಹೋದಲ್ಲಿ ಕೇಂದ್ರದವರು ಬಾಕಿ ಮೊಬಲಗು ಪಾವತಿಸಲು ವಿಳಂಬ ಮಾಡುತ್ತಾರೆ. ಆದುದರಿಂದ ಮುಂದಿನ ವಿಶೇಷ ಸಿಂಡಿಕೇಟ್ ಸಭೆಗೆ one time settlementಗಾಗಿ ಬಾಕಿ ಉಳಿಸಿಕೊಂಡಿರುವ ಅಧ್ಯಯನ ಕೇಂದ್ರದವರನ್ನು ಕರೆಯಿಸಿ Negotiation ಮಾಡಬಹುದು ಎಂದರು.

ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ, ಸುಜಲ ಎಜ್ಯುಕೇಶನ್ ಅಕಾಡೆಮಿ ಮತ್ತು ಜೆ.ಎಸ್.ಗ್ರೂಪ್ ಆಫ್ ಕಾಲೇಜು, ಬೆಂಗಳೂರು ಇವರ ಮನವಿಗಳ ಆಧಾರದಲ್ಲಿ ಮಾನ್ಯ ಕುಲಸಚಿವರು ದಿನಾಂಕ:17–02–2025 ರಂದು ದೂರ ಶಿಕ್ಷಣ ಇಲಾಖೆಗೆ ಬರೆದ ಪತ್ರಕ್ಕೆ ಸಂಬಂಧಿಸಿದಂತೆ ಒಟ್ಟು 1700 ವಿದ್ಯಾರ್ಥಿಗಳ ದಾಖಲಾತಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳೊಂದಿಗೆ ವಿವರವಾದ ಚರ್ಚೆಯಾಗಬೇಕು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

2025–ಸಿಂ–4.20.1(ಜಿ): ಸುಜಲಾ ಕಾಲೇಜ್ ಆಫ್ ಕಾಮರ್ಸ್, ಹಾಸನ ಮತ್ತು ಜೆ.ಎಸ್ ಗ್ರೂಪ್ ಆಫ್ ಕಾಲೇಜು, ಬೆಂಗಳೂರು ಕಲಿಕಾರ್ಥಿ ಸೇವಾ ಕೇಂದ್ರಗಳ 1700 ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶದ ಪ್ರಕಾರ ಕ್ರಮವಹಿಸಲಾಗುವುದು.

2025–ಸಿಂ–4.20.1(ಹೆಚ್): ವಿಶ್ವವಿದ್ಯಾಲಯದಲ್ಲಿ ನಡೆದ ಘಟಿಕೋತ್ಸವ ಸಮಾರಂಭಕ್ಕೆ ಪಡೆದ ಮುಂಗಡ ಹಣ ಎಷ್ಟು ಹಾಗೂ ಒಟ್ಟಾರೆ ಮಾಡಲಾದ ವೆಚ್ಚಗಳ ಪೂರ್ಣ ಮಾಹಿತಿಯನ್ನು ರಶೀದಿ ಸಹಿತ ದಾಖಲಾತಿಗಳೊಂದಿಗೆ ಸಭೆಗೆ ಮಂಡಿಸುವುದು ಹಾಗೂ ಘಟಕೋತ್ಸವಕ್ಕೆ ಆಗಮಿಸುವ ವಿ.ಐ.ಪಿ/ವಿ.ವಿ.ಐ.ಪಿ ಪಾಸ್‌ಗಳನ್ನು ಉಸ್ತುವಾರಿ ವಹಿಸಿದ ಅಧಿಕಾರಿ ಯಾರು? ಒಟ್ಟಾರೆ ವಿತರಿಸಿದ ಪಾಸ್‌ಗಳೆಷ್ಟು, ಪಾಸ್ ವಿತರಣೆಯ ಮಾನದಂಡವೇನು? ಸಂಪೂರ್ಣ ಮಾಹಿತಿಯನ್ನು ಸಭೆಗೆ ಮಂಡಿಸಿ ಚರ್ಚಿಸುವುದು.

ಕುಲಸಚಿವ(ಮೌಲ್ಯಮಾಪನ)ರವರು ಮಾಹಿತಿ ನೀಡುತ್ತಾ, ವಿಶ್ವವಿದ್ಯಾಲಯದಲ್ಲಿ ನಡೆದ 34ನೇ ವಾರ್ಷಿಕ ಘಟಿಕೋತ್ಸವಕ್ಕೆ ರೂ.40,00,000–00 (ರೂಪಾಯಿ ನಲವತ್ತು ಲಕ್ಷ ಮಾತ್ರ) ಗಳನ್ನು ಮುಂಗಡ ಪಡೆಯಲಾಗಿದ್ದು, ಒಟ್ಟಾರೆ ಮಾಡಲಾದ ವೆಚ್ಚಗಳ ಮಾಹಿತಿಯು ಲೆಕ್ಕಚಾರದ ಹಂತದಲ್ಲಿದೆ. ವಿ.ಐ.ಪಿ/ವಿ.ವಿ.ಐ.ಪಿ. ಪಾಸ್‌ಗಳ ವಿತರಣೆಗೆ ಪರೀಕ್ಷಾ ವಿಭಾಗದ ಉಪಕುಲಸಚಿವರಿಗೆ ಜವಾಬ್ದಾರಿಯನ್ನು ನೀಡಿದ್ದು, ಸನ್ಮಾನ್ಯ ಕುಲಾಧಿಪತಿಗಳ ಕಛೇರಿಯಿಂದ ನಿಗದಿಪಡಿಸಿದಂತೆ ಆಸನ ಮತ್ತು ಪಾಸ್‌ಗಳ ವ್ಯವಸ್ಥೆಯನ್ನು ಮಾಡಲಾಗಿತ್ತು ಮತ್ತು ಮಾನ್ಯ ರಾಜ್ಯಪಾಲರ ಕಛೇರಿಯ ನಿರ್ದೇಶನ ಹಾಗೂ ಪೋಲಿಸ್ ಇಲಾಖೆಯ ಭದ್ರತಾ ಹಿತದೃಷ್ಟಿಯಿಂದ ಪಾಸ್‌ಗಳನ್ನು ವಿತರಿಸಲಾಗಿದ್ದು, ಪ್ರತಿ ಸಿಂಡಿಕೇಟ್ ಸದಸ್ಯರಿಗೆ ಐದು ಪಾಸ್‌ಗಳು, ಪಿಹೆಚ್.ಡಿ. ಪಡೆದ ಸಂಶೋಧನಾರ್ಥಿಗಳಿಗೆ ಒಂದು, ಸ್ವರ್ಣಪದಕ ಪಡೆದ ವಿದ್ಯಾರ್ಥಿ ಮತ್ತು ಪೋಷಕರಿಗೆ ಒಟ್ಟು ಎರಡು, ಗಣ್ಯಾತಿಗಣ್ಯರಿಗೆ, ಮಾಧ್ಯಮದವರಿಗೆ, ಸ್ವರ್ಣಪದಕ ನೀಡಿದ ದಾನಿಗಳಿಗೆ–01 ಸೇರಿದಂತೆ ಒಟ್ಟು 1270 ಪಾಸ್‌ಗಳನ್ನು ಮುದ್ರಿಸಲಾಗಿದ್ದು, ಇವುಗಳಲ್ಲಿ a) VIP/VVIP Pass -160, (b) Press Pass-60, (c) Donor Pass-150, (d) Staff Pass -400, (e) Student Pass-25 and (f) Parents Pass -250 ಗಳಾಗಿವೆ.

2025–ಸಿಂ–4.20.1(ಐ): ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಪರೀಕ್ಷೆ/ ಫಲಿತಾಂಶ/ ಅಂಕಪಟ್ಟಿ ಸಂಬಂಧ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿರುವುದಾಗಿ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿರುವುದು ಪತ್ರಿಕೆಗಳಲ್ಲಿ ಸಹ ವರದಿಯಾಗಿದ್ದು, ಈ ಕುರಿತು ವಿಶ್ವವಿದ್ಯಾಲಯವು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚೆ.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಸ್ನಾತಕ ಪದವಿಯ 5 ಮತ್ತು 6ನೇ ಸೆಮಿಸ್ಟರ್‌ನ ಅಂಕತಃಖ್ತೆಗಳನ್ನು ನವೆಂಬರ್ ಮಾಹೆಯಲ್ಲಿ ಮುದ್ರಿಸಿ ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಲಾಗಿದ್ದು, ಉಳಿದ 1 ರಿಂದ 4ನೇ ಸಮಿಸ್ಟರ್‌ನ ಅಂಕತಃಖ್ತೆಗಳನ್ನು ಮುದ್ರಿಸಲಾಗಿದ್ದು, ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಲಾಗುತ್ತದೆ ಎಂದರು.

2025–ಸಿಂ–4.20.2: <u>ಪ್ರೊ. ಸಾಕಮ್ಮ ಬಿ.</u>

2025–ಸಿಂ–4.20.2(ಎ): ಕುವೆಂಪು ವಿಶ್ವವಿದ್ಯಾಲಯದಲ್ಲಿ Computer Programmer ಎಷ್ಟು ಜನರಿದ್ದಾರೆ? ಇವರಿಂದ ಟೆಂಡರ್ ಕೆಲಸ ಮಾಡಿಸುತ್ತಿದ್ದೀರಾ ಅಥವಾ ಹೊರಗಿನವರಿಂದ ಮಾಡಿಸುತ್ತಿದ್ದೀರಾ ತಿಳಿಸಿ.

ಕುವೆಂಪು ವಿಶ್ವವಿದ್ಯಾಲಯದಲ್ಲಿ ಮೂರು ಜನ ಕಂಪ್ಯೂಟರ್ ಪ್ರೋಗ್ರಾಮರ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದಿನಾಂಕ:17–04–2024ರ ಜ್ಞಾಪನದಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್, ತಾಂತ್ರಿಕ ಸಹಾಯಕ ಮತ್ತು ಡ್ರಾಫ್ಟ್ಸ್‌ಮನ್ ಆಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕೆಲಸದ ಜೊತೆಗೆ ವಿವಿಧ ವಿಭಾಗಗಳ ಟೆಂಡರ್ ಕಾರ್ಯಗಳನ್ನು ನಿರ್ವಹಿಸಲು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿತ್ತು. ಆದರೆ, ಆಯಾಯ ನೌಕರರುಗಳ ವಿಭಾಗದ ಮುಖ್ಯಸ್ಥರುಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವಿಭಾಗಗಳಲ್ಲಿ ಅವರುಗಳಿಗೆ ಪೂರ್ಣ ಪ್ರಮಾಣದ ಕೆಲಸವಿರುವುದರಿಂದ ಹೆಚ್ಚುವರಿಯಾಗಿ ನೀಡಲಾಗಿರುವ ಇ–ಟೆಂಡರ್ ನೋಡಲ್ ಅಧಿಕಾರಿಯ ಕಾರ್ಯಭಾರವನ್ನು ಕೈಬಿಡುವಂತೆ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ಟೆಂಡರ್ ಕಾರ್ಯವನ್ನು ಅತೀ ತುರ್ತಾಗಿ ನಿರ್ವಹಿಸಬೇಕಾದ ಅಗತ್ಯವಿದ್ದುದ್ದರಿಂದ ಟೆಂಡರ್ ಪ್ರಕ್ರಿಯೆ ನಿರ್ವಹಿಸಲು ಪ್ರೀಬಿಡ್ ಕೆಲಸ ಮತ್ತು ಟೆಂಡರ್ ಸಂಬಂಧಿತ ಇತರೆ ಕೆಲಸಗಳನ್ನು ನಿರ್ವಹಿಸಿದ ಅನುಭವವುಳ್ಳ Jashank Protech Enterprises, Shivamogga ಸಂಸ್ಥೆಯ ಮೂಲಕ ತಾಂತ್ರಿಕ ಸೇವೆಯನ್ನು ಪಡೆಯಲಾಗುತ್ತಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

2025–ಸಿಂ–4.20.2(ಬಿ): ಉಪಕುಲಸಚಿವ ಹುದ್ದೆಗೆ ಪ್ರಮೋಷನ್ ಕೊಡುವುದರ ಬಗ್ಗೆ ಚರ್ಚಿಸಲಾಗಿದ್ದು, (ಹಿಂದಿನ ಸಿಂಡಿಕೇಟ್ ಸಭೆಯಲ್ಲಿ) ಈ ವಿಷಯದ ಬಗ್ಗೆ ಕೈಗೊಂಡ Action Taken ನ್ನು ತಿಳಿಸಲು ಕೋರಿದೆ.

ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಒಟ್ಟು 10 ಉಪಕುಲಸಚಿವ ಹುದ್ದೆಗಳು ಮಂಜೂರಾಗಿರುತ್ತದೆ. ಇದರಲ್ಲಿ 2 ಹುದ್ದೆಗಳಿಗೆ ಅಧ್ಯಾಪಕರಿಂದ ನಿಯೋಜನೆ ಮೇರೆಗೆ ತುಂಬಬೇಕಾಗಿದ್ದು, ಉಳಿದ 8 ಹುದ್ದೆಗಳ ಭರ್ತಿಗಾಗಿ ಈಗ ಪಾಲಿಸುತ್ತಿರುವ ಮೈಸೂರು ವಿಶ್ವವಿದ್ಯಾಲಯದ ಸಿ & ಆರ್ ನಿಯಮಗಳನ್ವಯ ಸದರಿ ಉಪಕುಲಸಚಿವ ಹುದ್ದೆಗೆ Promotion by Selection ಮಾಡಬೇಕಾಗಿರುತ್ತದೆ. ಸದರಿ ಹುದ್ದೆಗಳ ಬಡ್ತಿಗಾಗಿ ಈಗಾಗಲೇ ಅರ್ಹ ಸಹಾಯಕ ಕುಲಸಚಿವರುಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 57ರನ್ವಯ ಅಭ್ಯರ್ಥಿಗಳ ಆಯ್ಕೆಗೆ ಒಂದು ನೇಮಕಾತಿ ಮಂಡಳಿ ರಚಿಸಿ ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ. ತದನಂತರ ದಿನಾಂಕ ನಿಗದಿಪಡಿಸಿ ಸಂದರ್ಶನ ಪ್ರಕ್ರಿಯೆಗಳನ್ನು ನಡೆಸಿ ಉಪಕುಲಸಚಿವ ಹುದ್ದೆಗೆ ಆಯ್ಕೆ ಮಾಡಲಾಗುವುದು ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

2025–ಸಿಂ–4.20.2(ಸಿ): ಶ್ರೀ ಯುವರಾಜ್ ಬಿನ್. ನಾಗಾನಾಯ್ಕ ರವರು ಆಂಗ್ಲ ವಿಭಾಗದಲ್ಲಿ ಪಿಹೆಚ್.ಡಿ. ಪದವಿಗೆ ರಿಜಿಸ್ಟ್ರೇಷನ್ ಮಾಡಿಸಿದ್ದು, ದಿ:01–03–2023 ರಂದು ರದ್ದುಪಡಿಸಲಾಗಿದೆ. ಇವರು ಪಿಹೆಚ್.ಡಿ. ವರ್ಕ್‌ನ್ನು ಮಾಡಲಿಕ್ಕೆ ಆಗದೇ ಇರುವ ಪ್ರಮುಖ ಕಾರಣ ಕೋವಿಡ್–19. 2020–21ರ ಅವಧಿಯಲ್ಲಿ ಈ ವಿದ್ಯಾರ್ಥಿ ಸ್ವತ: ಕೋವಿಡ್ ರೋಗಕ್ಕೆ ತುತ್ತಾಗಿ ಆಸ್ಪತ್ರೆಗೆ ದಾಖಲಾಗಿದ್ದು ತನ್ನ ಕುಟುಂಬದವರೆಲ್ಲರೂ ಕೋವಿಡ್ ರೋಗಕ್ಕೆ ತುತ್ತಾಗಿ ಆಸ್ಪತ್ರೆಗೆ ದಾಖಲಾಗಿದ್ದ ಕಾರಣ ಹಾಗೂ ಹೊರಗಡೆ ಹೋಗಿ ಸೆಕೆಂಡರಿ ಡೇಟಾ ಕಲೆಕ್ಟ್ ಮಾಡಲಿಕ್ಕೆ ಆಗದೇ ಎರಡು ವರ್ಷದಲ್ಲಿ ಯಾವುದೇ ಶೈಕ್ಷಣಿಕ ಪ್ರಗತಿ ಇಲ್ಲದೇ ಇರುವ ಕಾರಣ ಅವಧಿ ಮುಗಿದಿದೆ ಎಂದು ರದ್ದುಪಡಿಸಲಾಗಿದೆ ಆದ ಪ್ರಯುಕ್ತ ದಯಮಾಡಿ ಕೋವಿಡ್ ಅವಧಿಯನ್ನು Extention ಎಂದು ಪರಿಗಣಿಸಿ ಪಿಹೆಚ್.ಡಿ. ಅವಧಿಯನ್ನು ಎರಡು ವರ್ಷಕ್ಕೆ ವಿಸ್ತರಿಸಬೇಕೆಂದು ಕೋರಲಾಗಿದೆ.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಶ್ರೀ ಯುವರಾಜ್, ಅರೆಕಾಲಿಕ ಪಿಹೆಚ್.ಡಿ. ಸಂಶೋಧನಾರ್ಥಿ, ಇಂಗ್ಲಿಷ್ ವಿಭಾಗ ಇವರ ಸಂಶೋಧನೆಯಲ್ಲಿ ಯಾವುದೇ ಪ್ರಗತಿ ಕಂಡುಬರದ ಹಿನ್ನೆಲೆಯಲ್ಲಿ ದಿನಾಂಕ:11–01–2023ರಂದು ನಡೆದ ಇಂಗ್ಲೀಷ್ ವಿಭಾಗದ ಡಾಕ್ಟರಲ್ ಸಮಿತಿ ಸಭೆಯ ನಿರ್ಣಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ, ಕುವೆಂಪು ವಿಶ್ವವಿದ್ಯಾಲಯದ ಪಿಹೆಚ್.ಡಿ. ವಿನಿಯಮ–2009ರ ಪ್ರಕರಣ 18.3ರನ್ವಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ನೋಂದಣಿಯನ್ನು ರದ್ದುಪಡಿಸಲಾಗಿದೆ. ಈ ಹಿಂದೆ ಸದರಿ ಅಭ್ಯರ್ಥಿಗೆ ವಿನಿಯಮಾನುಸಾರ ಒಟ್ಟು 02 ವರ್ಷಗಳ ಅಂದರೆ, ದಿನಾಂಕ:20-01-2020 ರಿಂದ 19-01-2021 ಹಾಗೂ ದಿನಾಂಕ:20-01-2021 ರಿಂದ 19-01-2022 ರವರೆಗೆ ಸಂಶೋಧನಾ ಅವಧಿಯನ್ನು ವಿಸ್ತರಿಸಲಾಗಿತ್ತು. ಯು.ಜಿ.ಸಿಯ ಸಾರ್ವಜನಿಕ ಪ್ರಕಟಣೆಯನ್ವಯ ದಿನಾಂಕ:30-06-2022 ರಂದು ಅಥವಾ ಅದಕ್ಕೂ ಮುಂಚಿತವಾಗಿ ಪ್ರಬಂಧ ಸಲ್ಲಿಸುವ ಹಂತದಲ್ಲಿರುವ ಸಂಶೋಧನಾ ಅಭ್ಯರ್ಥಿಗಳಿಗೆ ಮಾತ್ರ 06 ತಿಂಗಳ ಅವಧಿಯನ್ನು ವಿಸ್ತರಿಸಲು ಅವಕಾಶವನ್ನು ಕಲ್ಪಿಸಲಾಗಿತ್ತು. ಉಳಿದಂತೆ, ಬೇರೆ ಯಾವ ಸಂಶೋಧನಾ ಅಭ್ಯರ್ಥಿಗಳಿಗೂ ಸಂಶೋಧನಾ ಅವಧಿ ವಿಸ್ತರಣೆಗೆ ಅವಕಾಶವಿರಲಿಲ್ಲ ಎಂಬ ಮಾಹಿತಿಯನ್ನು ಒದಗಿಸಿದರು.

ಶ್ರೀಮತಿ ಸಾಕಮ್ಮ ರವರು ಮಾತನಾಡಿ, ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಒಂದು ವರ್ಷ ಅವಕಾಶ ನೀಡಿದಲ್ಲಿ ವಿದ್ಯಾರ್ಥಿಯು ಪಿಹೆಚ್.ಡಿ. ಪೂರ್ಣಗೊಳಿಸಲು ಅನುಕೂಲವಾಗುತ್ತದೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅವಕಾಶ ನೀಡಿದರೆ ಆತನಿಗೆ ಅನುಕೂಲವಾಗುತ್ತದೆ ಎಂದರು. ಡಾ. ಕೆ.ಎಲ್. ಅರವಿಂದ ರವರು ಮಾತನಾಡಿ ತಾಂತ್ರಿಕವಾಗಿ ಇದಕ್ಕೆ ಅವಕಾಶವಿಲ್ಲ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಇಂತಹ ಹಲವು ಪ್ರಕರಣಗಳು ಬಾಕಿ ಇವೆ. ಈತನಿಗೆ ಕೊಟ್ಟರೆ ಎಲ್ಲರನ್ನೂ ಪರಿಗಣಿಸಬೇಕಾಗುತ್ತದೆ. ಆದರೆ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿರುವಂತೆ Re-registration ಮಾಡಿಕೊಂಡು ಸಂಶೋಧನೆ ಪೂರ್ಣಗೊಳಿಸಲು ಅವಕಾಶ ನೀಡಬಹುದು. Re-registration ಮಾಡಿಕೊಂಡರೆ ಮತ್ತೆ ಪ್ರವೇಶ ಪರೀಕ್ಷೆ ಮತ್ತು ಕೋರ್ಸ್‌ವರ್ಕ್ ಪರೀಕ್ಷೆ ಬರೆಯುವ ಅಗತ್ಯವಿಲ್ಲ. ಆದರೆ, ಅವರು ಕೇವಲ ಎರಡು ವರ್ಷಗಳಲ್ಲಿ ಸಂಶೋಧನೆ ಪೂರ್ಣಗೊಳಿಸಿ ಮಹಾಪ್ರಬಂಧ ಸಲ್ಲಿಸಬೇಕಾಗುತ್ತದೆ ಎಂದರು.

ಚರ್ಚೆಯ ನಂತರ ಇಂತಹ ಪ್ರಕರಣಗಳಲ್ಲಿ ಅರ್ಹ ಮತ್ತು ಆಸಕ್ತ ಪಿಹೆಚ್.ಡಿ. ಸಂಶೋಧನಾರ್ಥಿಗಳು Re-registration ಮಾಡಿಕೊಂಡು ಸಂಶೋಧನೆ ಪೂರ್ಣಗೊಳಿಸಲು ಅವಕಾಶ ನೀಡುವ ಬಗ್ಗೆ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿರುವಂತೆ ಮರುನೋಂದಣಿ (Re-registration) ಕುರಿತಾಗಿ ಪರಿಶೀಲಿಸಬೇಕೆಂದು ನಿರ್ಣಯಿಸಲಾಯಿತು.

2025-ಸಿಂ-4.20.2(ಡಿ): Degree ಕಾಲೇಜುಗಳ ಕ್ಯಾಲೆಂಡರ್ಸ್ ಆಫ್ ಇವೆಂಟ್ಸ್‌ನ್ನು 10 ದಿನಗಳ ಅವಧಿಗೆ ಮುಂದೂಡುವ ಬಗ್ಗೆ.

ಈ ಕುರಿತು Degree ಕಾಲೇಜುಗಳಿಂದ ಯಾವುದೇ ಪ್ರಸ್ತಾಪನೆಗಳು ಬಂದಿರುವುದಿಲ್ಲ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

**2025-ಸಿಂ-4.20.3: <u>ಡಾ. ಮಧು ಜಿ.</u>**

2025-ಸಿಂ-4.20.3(ಎ): ಸಾಗರ ಗಂಗೋತ್ರಿ ಬಿ.ಇಡಿ. ಕಾಲೇಜು, ಉಳ್ಳೂರು, ಸಾಗರ ತಾಲ್ಲೂಕು ಎನ್.ಸಿ.ಟಿ.ಇ. ಮಾನ್ಯತೆ ಹಾಗೂ ವಿಶ್ವವಿದ್ಯಾಲಯದ ಸಂಯೋಜನೆಯು 2023-24ನೇ ಶೈಕ್ಷಣಿಕ ಸಾಲಿನಿಂದ ರದ್ದಾಗಿದ್ದು, ವಿಶ್ವವಿದ್ಯಾಲಯವು ದಾಖಲಾತಿ ಹಾಗೂ ಈ ಶೈಕ್ಷಣಿಕ ವರ್ಷದ ಮೊದಲ ಹಾಗೂ ದ್ವಿತೀಯ ಸೆಮಿಸ್ಟರ್‌ನ ಪರೀಕ್ಷೆಗಳನ್ನು ವಿಶ್ವವಿದ್ಯಾಲಯವು ನೀಡಿರುವುದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಮಾಹಿತಿ, ಚರ್ಚೆ ಹಾಗೂ ನಿರ್ಣಯಕ್ಕಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಮುಂದುವರೆದು ಮಾತನಾಡಿದ ಡಾ. ಜಿ. ಮಧು ರವರು, ಸದರಿ ಕಾಲೇಜಿಗೆ 2022-23ರಲ್ಲಿ ಎನ್.ಸಿ.ಟಿ.ಇ. ಮಾನ್ಯತೆ ರದ್ದಾಗಿದೆ. ಅವರಿಗೆ 3 ವರ್ಷಗಳಿಂದ ವಿಶ್ವವಿದ್ಯಾಲಯವು ಸಂಯೋಜನೆ ನೀಡಿಲ್ಲ. ಸದರಿ ಕಾಲೇಜಿನಲ್ಲಿ ಪ್ರವೇಶ ಪಡೆಯದಂತೆ ಸಿ.ಡಿ.ಸಿ. ಯಿಂದ ಪತ್ರಿಕಾ ಪ್ರಕಟಣೆ ನೀಡಿದ್ದಾರೆ. ಆದಾಗ್ಯೂ ಅವರು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, WP 18662/2024 (Edn-Res)filed by sagar Gangothri Education Institution Vs.S.R.C. (NCTE) & Ors., on the file of the High Court of Karnataka, Bangalore. ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ 2023-24ನೇ ಸಾಲಿನ ಬಿ.ಇಡಿ. ಪ್ರಥಮ ಸೆಮಿಸ್ಟರ್ ಪರೀಕ್ಷೆಗೆ ಸದರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಜರಾಗಲು ಅನುಮತಿ ನೀಡಿ ಪರೀಕ್ಷೆ ಮಾತ್ರ ಬರೆಯಲು ಅನುಮತಿಸಿ ಫಲಿತಾಂಶವನ್ನು ತಡೆಹಿಡಿಯಲಾಗಿತ್ತು. ನಂತರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಅವರಿಗೆ ಫಲಿತಾಂಶ ನೀಡುವಂತೆ ಮತ್ತು ಮುಂದಿನ ಪ್ರವೇಶವನ್ನು ಕೂಡ ನೀಡುವಂತೆ ಆದೇಶ ನೀಡಿದೆ. ಅದರ ಪ್ರಕಾರ ಫಲಿತಾಂಶ ಪ್ರಕಟಿಸಲಾಗಿದೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ನ್ಯಾಯಾಲಯವು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೀರ್ಪು ನೀಡುತ್ತದೆ. ನಾವು ಸಮರ್ಪಕ ದಾಖಲೆಗಳೊಂದಿಗೆ ಅಪೀಲು ಹೋಗಬೇಕು ಎಂದರು. ಶ್ರೀ ಶಶಿಧರ್ ಬಿ.ಎನ್. ರವರು ವಿಶ್ವವಿದ್ಯಾಲಯದ ಅಡ್ವೋಕೇಟ್‌ನ್ನು ಬದಲಿಸುವಂತೆ ತಿಳಿಸಿದರು. ಈ ಪ್ರಕರಣದಲ್ಲಿ ಅಡ್ವೋಕೇಟ್‌ನ್ನು ಬದಲಿಸಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

ಕುಲಸಚಿವರು ಮಾತನಾಡಿ, ಸಾಗರ ಗಂಗೋತ್ರಿ ಬಿ.ಇಡಿ. ಕಾಲೇಜು, ಉಳ್ಳೂರು, ಸಾಗರ ತಾಲ್ಲೂಕು – ಇವರಿಗೆ ವಿಶ್ವವಿದ್ಯಾಲಯವು ಸಂಯೋಜನೆ ನೀಡಿರಲಿಲ್ಲ. ಎನ್.ಸಿ.ಟಿ.ಇ. ಮಾನ್ಯತೆ ನವೀಕರಿಸಿಲ್ಲ. ಸಂಸ್ಥೆಯವರು ಎನ್.ಸಿ.ಟಿ.ಇ. ಮತ್ತು ವಿಶ್ವವಿದ್ಯಾಲಯದ ವಿರುದ್ಧ ನ್ಯಾಯಾಲಯಕ್ಕೆ ಹೋಗಿದ್ದಾರೆ. ನ್ಯಾಯಾಲಯವು ತಡೆಯಾಜ್ಞೆ ನೀಡಿದೆ. ತಡೆಯಾಜ್ಞೆಯನ್ನು ತೆರವುಗೊಳಿಸಲು ವಿಶ್ವವಿದ್ಯಾಲಯವು ಕ್ರಮ ಕೈಗೊಂಡಿದೆ ಎಂದರು.

ಚರ್ಚೆಯ ನಂತರ ಸೂಕ್ತ ದಾಖಲೆಗಳೊಂದಿಗೆ ಸಾಗರ ಗಂಗೋತ್ರಿ ಬಿ.ಇಡಿ. ಕಾಲೇಜು, ಉಳ್ಳೂರು, ಸಾಗರ ತಾಲ್ಲೂಕು – ಇವರ ವಿರುದ್ಧ ಡಿವಿಜನಲ್ ಬೆಂಚ್‌ಗೆ ಹೋಗುವಂತೆ ಸಭೆಯು ನಿರ್ಣಯಿಸಿತು.

**2025-ಸಿಂ-4.20.3(ಬಿ):** ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಉಪಕುಲಸಚಿವರ ಹುದ್ದೆಗಳ ಬಡ್ತಿಗೆ ಸಂಬಂಧಿಸಿದಂತೆ ವಿವರಗಳ ಮಾಹಿತಿ, ಚರ್ಚೆ ಹಾಗೂ ನಿರ್ಣಯಕ್ಕಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಸಾಕಮ್ಮ ಬಿ. ರವರ ಪ್ರಶ್ನೆಗೆ ಮಾಹಿತಿ ನೀಡಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

**2025-ಸಿಂ-4.20.3(ಸಿ):** ಶ್ರೀ ಮಂಜುನಾಥ್, ನಿವೃತ್ತ ಹಿರಿಯ ಸಹಾಯಕ ಇವರು ದಿನಾಂಕ:31-01-2023 ರಂದು ವಯೋನಿವೃತ್ತಿ ಹೊಂದಿದ್ದು, ದಿ:11-05-2023 ರಂದು ಪಿಂಚಣಿ ಕಡಿತಗೊಳಿಸಿ ಆದೇಶ ಹೊರಡಿಸಲಾಗಿದೆ. ನಿವೃತ್ತಿಯ ಮೂರು ತಿಂಗಳ ನಂತರ ವೇತನ ಕಡಿತಗೊಳಿಸಿ ವಸೂಲಾತಿ ಮಾಡಿರುವ ಹಿನ್ನೆಲೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆಯನುಸಾರ ದಿನಾಂಕ:01-02-2023 ರಿಂದ ಪೂರ್ವಾನ್ವಯವಾಗುವಂತೆ ಕಡಿತಗೊಳಿಸಲಾದ ಮೂಲ ವೇತನ, ಪಿಂಚಣಿ ಮೂಲ ವೇತನ ಹಾಗೂ ಉಪಲಬ್ದಗಳ ಹಿಂಪಾವತಿ ಕುರಿತಂತೆ ವಿಸ್ತೃತ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ ಪವಿತ್ರ –2 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿದ ತೀರ್ಪಿನನ್ವಯ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿ ಸಿದ್ಧಪಡಿಸಲ ರಚಿಸಲಾದ ಸಮಿತಿಯ ವರದಿಯ ಅನುಸಾರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ದಿನಾಂಕ:31–03–2017ಕ್ಕೆ ಇದ್ದಂತೆ ಪ್ರಕಟಿಸಲಾಗಿರುವ ಅಧ್ಯಾಪಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಯನುಸಾರ ವಿಶ್ವವಿದ್ಯಾಲಯದಲ್ಲಿ ವಿವಿಧ ವೃಂದಗಳಿಗೆ ನೀಡಲಾದ ಬಡ್ತಿಯನ್ನು ಪುನರಾವಲೋಕನ ಮಾಡಿ KCSR (RPP) Act 1973ರ ಕಾಯ್ದೆಯಡಿ ಅಧ್ಯಾಪಕೇತರ ನೌಕರರ ವಿವಿಧ ವೃಂದಗಳ ಹುದ್ದೆಗಳಿಗೆ ನೀಡಲಾದ ಬಡ್ತಿ/ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕಗಳನ್ನು ನಿಗದಿಪಡಿಸಲಾಗಿದ್ದು, ಅದರಂತೆ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ 17 ಅಧಿಕಾರಿ/ನೌಕರರ ವೇತನವನ್ನು ಮರು ನಿಗದಿಪಡಿಸಲು ದಿನಾಂಕ:15–04–2023 ರಂದು ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿ ಶ್ರೀ ಮಂಜುನಾಥ್ ಇವರ ಪ್ರಥಮ ದರ್ಜೆ ಸಹಾಯಕ ಹುದ್ದೆಯ ಅರ್ಹತಾ ದಿನಾಂಕವನ್ನು 22–06–1998ರ ಬದಲಿಗೆ ದಿನಾಂಕ:06–12–2001ಕ್ಕೆ ನಿಗದಿಪಡಿಸಿ ಅದರಂತೆ ವೇತನ ನಿಗದೀಕರಣ ಮಾಡಲಾಗಿದೆ.

ಶ್ರೀ ಮಂಜುನಾಥ್ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ:15–04–2023 ರ ಅಧಿಸೂಚನೆಯಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಯ ಅರ್ಹತಾ ದಿನಾಂಕದನುಸಾರ ವೇತನವನ್ನು ಮರು ನಿಗದಿಪಡಿಸಲಾದ ಕ್ರಮವನ್ನು ಆಕ್ಷೇಪಿಸಿ, ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ W.P.No.9983/2023(S-RES) ಶ್ರೀ ಸುಬ್ರಮಣ್ಯ ಹೆಚ್.ಎನ್. ಮತ್ತು ಇತರರು V/s ಕುವೆಂಪು ವಿಶ್ವವಿದ್ಯಾಲಯ ಪ್ರಕರಣದಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ಸದರಿ ತಡೆಯಾಜ್ಞೆ ಆದೇಶದಲ್ಲಿ ನ್ಯಾಯಾಲಯದ ಅಂತಿಮ ಆದೇಶದಲ್ಲಿ ಪ್ರತಿವಾದಿಯಾದ ವಿಶ್ವವಿದ್ಯಾಲಯದ ಪರವಾಗಿ ತೀರ್ಪು ಬಂದಲ್ಲಿ ಮಧ್ಯಂತರ ಆದೇಶದ ಮೇರೆಗೆ ಪಡೆಯಲಾದ ಆರ್ಥಿಕ ಸೌಲಭ್ಯಗಳನ್ನು ಹಿಂದಿರುಗಿಸಬೇಕೆಂದು ಆದೇಶಿಸಿರುತ್ತದೆ. ಅದರಂತೆ ಮಾನ್ಯ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದಂತೆ 8 ನೌಕರರುಗಳ ವೇತನವನ್ನು ಈ ಹಿಂದಿನಂತೆ ಪಾವತಿಸಲಾಗುತ್ತಿದೆ. ಶ್ರೀ ಮಂಜುನಾಥ್ ಇವರು ದಿ:15–04–2023ರ ವಿಶ್ವವಿದ್ಯಾಲಯದ ಆದೇಶವನ್ನು ಪ್ರಶ್ನಿಸಿ, ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಸದರಿ W.P.No.9983/2023(S-RES) ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಇನ್ನೂ ಅಂತಿಮ ಆದೇಶವಾಗಿರುವುದಿಲ್ಲ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

ಡಾ.ಜಿ.ಮಧು ರವರು ಮಾತನಾಡಿ, ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಈಗಾಗಲೇ ವಯೋನಿವೃತ್ತಿ ಹೊಂದಿರುವ ಶ್ರೀ ಮಂಜುನಾಥ್‌ರವರಿಗೆ ಸೌಲಭ್ಯಗಳನ್ನು ನೀಡಬಹುದಾಗಿದ್ದು, ಮರು ಪರಿಶೀಲಿಸುವಂತೆ ಕೋರಿದರು. ಈ ಕುರಿತು ಪರಿಶೀಲಿಸುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

**2025–ಸಿಂ–4.20.4:** **ಶ್ರೀ ಲಕ್ಷ್ಮಿಕಾಂತ ಚಿಮನೂರು**

**2025–ಸಿಂ–4.20.4(ಎ):** ಸಿಂಡಿಕೇಟ್ ಸದಸ್ಯರಿಗೆ ಪ್ರತಿ ಸಿಂಡಿಕೇಟ್ ಸಭೆಗೆ ರೂ.8,000/– ಗಳನ್ನು ನಿಗಧಿ ಮಾಡುವಂತೆ ಕೋರಿ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಸಚಿವರು ಮಾಹಿತಿ ನೀಡಿ, ದಿನಾಂಕ:19–10–2019 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಶಾಸನಬದ್ಧ ಸಮಿತಿಗಳ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಕಾರು ಮೈಲೇಜ್ ರೂ.12/– ರಿಂದ 15/– ಗಳಿಗೆ ಹಾಗೂ ಉಪಸ್ಥಿತ ಭತ್ಯೆ ದಿನವೊಂದಕ್ಕೆ ರೂ.2000/– ರಿಂದ 3000/–ಗಳಿಗೆ ಪರಿಷ್ಕರಿಸಿ ಆದೇಶಿಸಲಾಗಿದೆ. ಸದರಿ ಉಪಸ್ಥಿತಿ ಭತ್ಯೆಯನ್ನು ಪರಿಷ್ಕರಿಸಿ ಪಾವತಿಸುತ್ತಿರುವ ಬಗ್ಗೆ ಲೆಕ್ಕ ಪರಿಶೋಧನಾಧಿಕಾರಿಗಳು ಆಕ್ಷೇಪಿಸಿರುತ್ತಾರೆ ಎಂದರು.

ಶ್ರೀ ಲಕ್ಷ್ಮಿಕಾಂತ ಚಿಮನೂರು ಮಾತನಾಡಿ ಈ ಹಿಂದೆ 2019ರಲ್ಲಿ ಪರಿಷ್ಕರಿಸಿದ್ದು, ಸುಮಾರು 5 ವರ್ಷಗಳು ಸಂದಿವೆ. ಈ ನಡುವೆ ಜನಪ್ರತಿನಿಧಿಗಳು, ನೌಕರರು ಸೇರಿದಂತೆ ಎಲ್ಲರ ವೇತನ ಭತ್ಯೆಗಳನ್ನು ಪರಿಷ್ಕರಿಸಲಾಗಿದ್ದು, ಸಿಂಡಿಕೇಟ್ ಸದಸ್ಯರ ಉಪಸ್ಥಿತಿ ಭತ್ಯೆಯನ್ನು ಕೂಡ ಪರಿಷ್ಕರಿಸಬಹುದು ಎಂದರು, ಎಲ್ಲಾ ಸದಸ್ಯರು ಧ್ವನಿಗೂಡಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ, ರೂ.8,000/–ಗಳಿಗೆ ಹೆಚ್ಚಿಸಿದಲ್ಲಿ ಆಕ್ಷೇಪಣೆಗಳಾಗುತ್ತದೆ. ಆದುದರಿಂದ ರೂ.5,000/–ಕ್ಕೆ ಹೆಚ್ಚಿಸಬಹುದು ಎಂದರು.

ಚರ್ಚೆಯ ನಂತರ, ಸಿಂಡಿಕೇಟ್ ಸೇರಿದಂತೆ ಶಾಸನಬದ್ಧ ಸಭೆಗಳಲ್ಲಿ ಭಾಗವಹಿಸುವ ಪ್ರಾಧಿಕಾರಗಳ ಸದಸ್ಯರ ಉಪಸ್ಥಿತಿ ಭತ್ಯೆಯನ್ನು ರೂ.3,000/–ಗಳಿಂದ ರೂ.5,000/–ಗಳಿಗೆ ಪರಿಷ್ಕರಿಸಿ ಹೆಚ್ಚಿಸಲು ಸಭೆಯು ನಿರ್ಣಯಿಸಿತು.

**2025–ಸಿಂ–4.20.4(ಬಿ):** ನಮ್ಮ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಸಹಾಯ ಕೋರಿ ಮುಖ್ಯಮಂತ್ರಿಗಳು ಮತ್ತು ಸರ್ಕಾರದ ಮುಖ್ಯಸ್ಥರನ್ನು ಭೇಟಿ ಮಾಡಲು ಶೀಘ್ರವೇ ದಿನಾಂಕ ನಿಗದಿ ಮಾಡುವ ಕುರಿತು.

ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಲು ದಿನಾಂಕ ಪಡೆಯಲಾಗುವುದು. ಸನ್ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಸಮಯದಲ್ಲಿ ದಿನಾಂಕ ನೀಡಬಹುದು. ವಿಶ್ವವಿದ್ಯಾಲಯದವರು ಮಂತ್ರಿಗಳು ಹಾಗೂ ಸರ್ಕಾರದ ಅಧಿಕಾರಿಗಳಿಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದರು.

ವಿಶ್ವವಿದ್ಯಾಲಯದ ಸಂಬಂಧಪಟ್ಟ ವಿಭಾಗದವರು ಪ್ರಸ್ತಾವನೆಗಳನ್ನು ಸಿದ್ದಪಡಿಸಲು ಹಾಗೂ ನ್ಯಾಕ್ ಸಮಿತಿಯ ಭೇಟಿ ನಂತರ ಒಂದು ದಿನಾಂಕ ನಿಗದಿಪಡಿಸಿಕೊಂಡು ಪ್ರಸ್ತಾವನೆಯೊಂದಿಗೆ ಹೋಗಿಬರಲು ನಿರ್ಣಯಿಸಲಾಯಿತು.

**2025–ಸಿಂ–4.20.4(ಸಿ):** 15 ವರ್ಷಗಳಿಗಿಂತ ಮೇಲ್ಪಟ್ಟು ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರನ್ನು ಮುಂದುವರೆಸುವಂತೆ ಮತ್ತು 3 ವರ್ಷಕ್ಕೆ ಅಂಕಗಳನ್ನು ಕೊಡುವಂತೆ ಕೋರಿ ಮತ್ತು ಸದರಿಯವರಿಗೆ ಬಾಕಿ ಉಳಿಸಿಕೊಂಡಿರುವ ವೇತನವನ್ನು ಶೀಘ್ರವೇ ಬಿಡುಗಡೆಗೊಳಿಸಲು ಕೋರಿ.

ಅತಿಥಿ ಉಪನ್ಯಾಸಕರನ್ನು ಯು.ಜಿ.ಸಿ. ನಿಯಮಗಳ ಪ್ರಕಾರ ಅರ್ಹತೆ ಮತ್ತು ಅವರುಗಳು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗುವುದು. ವಿಶ್ವವಿದ್ಯಾಲಯ ಮತ್ತು ಘಟಕ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದವರಿಗೆ ಪ್ರತಿ ವರ್ಷಕ್ಕೆ 3 ಅಂಕಗಳಂತೆ 15 ವರ್ಷಗಳಿಗೆ ಗರಿಷ್ಠ 45 ಅಂಕಗಳನ್ನು ಮಾತ್ರ ನೀಡಬಹುದಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಾಯಿತು.

**2025–ಸಿಂ–4.20.4(ಡಿ):** ಅತಿಥಿ ಗೃಹದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಮುಖ್ಯ ಅಡುಗೆಯವರು, ಅಡುಗೆ ಸಹಾಯಕರು, ರೂಂ ಬಾಯ್ಸ್, ಸ್ವೀಪರ್‌ಗಳು ಕೆಲಸದ ಅವಧಿ ಮುಗಿದ ಮೇಲು ಸಹ ಹೆಚ್ಚಿನ ಕೆಲಸ ಮಾಡುತ್ತಿರುವುದರಿಂದ ಅವರು ಮಾಡುವ ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ವೇತನವನ್ನು ನಿಗಧಿ ಮಾಡುವಂತೆ ಕೋರಿ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿದ ಕನಿಷ್ಠ ವೇತನದರದಂತೆ ವೇತನ ಪಾವತಿಸಲಾಗುತ್ತಿದೆ. ಹೆಚ್ಚುವರಿ ಕೆಲಸಕ್ಕೆ ಗಂಟೆಯ ಲೆಕ್ಕದಲ್ಲಿ ಹೆಚ್ಚುವರಿ ವೇತನ ಪಾವತಿಸುವಂತೆ ಕಾರ್ಮಿಕ ಇಲಾಖೆಯ ಆದೇಶ ಇದೆ ಎಂದರು. ಶ್ರೀ ಮುಸಾವೀರ್ ಬಾಷಾ ಮತ್ತು ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ಅತಿಥಿ ಗೃಹದ ಸಿಬ್ಬಂದಿಗಳು ಭಾನುವಾರ ಸಹ ಕರ್ತವ್ಯ ನಿರ್ವಹಿಸುತ್ತಾರೆ. ಆದುದರಿಂದ, ಅವರಿಗೆ ಹೆಚ್ಚುವರಿ ವೇತನ ನೀಡಬಹುದು ಎಂದರು. ಚರ್ಚೆಯ ನಂತರ ನಿಗದಿತ ಅವಧಿಗಿಂತ ಹೆಚ್ಚಿನ ಕೆಲಸ ನಿರ್ವಹಿಸಿದಲ್ಲಿ ಅವರಿಗೆ ಕಾರ್ಮಿಕ ಇಲಾಖೆ ನಿಗದಿಪಡಿಸಿರುವಂತೆ ಹೆಚ್ಚುವರಿ ವೇತನ ಪಾವತಿಸಲು ಕ್ರಮಕೈಗೊಳ್ಳುವಂತೆ ಸಭೆಯು ನಿರ್ಣಯಿಸಿತು.

**2025–ಸಿಂ–4.20.4(ಎಫ್):** ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ನೌಕರರಿಗೆ ಪ್ರತಿ ತಿಂಗಳು ಸಂಬಳ ಕೊಡುವಂತೆ ಏಜೆನ್ಸಿಯವರಿಗೆ ನಿರ್ದೇಶನ ಮಾಡಿ ಆದೇಶಿಸುವಂತೆ ಕೋರಿ.

ಹೊರಗುತ್ತಿಗೆ ಆಧಾರದಲ್ಲಿ ಮಾನವ ಸೇವೆ ಒದಗಿಸುವ ಸಲುವಾಗಿ ಪ್ರಸ್ತುತ ಹೊಸದಾಗಿ ಟೆಂಡರ್ ಪ್ರಕ್ರಿಯೆ ಆಗಿದ್ದು, ಕಾರ್ಯಾದೇಶ ಹೊರಡಿಸುವ ಏಜೆನ್ಸಿ ಸಂಸ್ಥೆಯೊಂದಿಗೆ ಮಾಡಿಕೊಳ್ಳುವ ಸೇವಾ ಒಪ್ಪಂದದಲ್ಲಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ವೇತನವನ್ನು ಸಕಾಲದಲ್ಲಿ ಪಾವತಿಸುವಂತೆ ಕರಾರನ್ನು ಮಾಡಿಕೊಳ್ಳಲಾಗುವುದು ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

**2025–ಸಿಂ–4.21: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

**2025–ಸಿಂ–4.22: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2025–ಸಿಂ–4.22.1: ಶ್ರೀ ಶಿವಕುಮಾರ್ ಎಂ :**

**2025–ಸಿಂ–4.22.1(ಎ): ವಿವಿಧ ಜಯಂತಿ ಮತ್ತು ಕಾರ್ಯಕ್ರಮಗಳನ್ನು ಸಕಾಲದಲ್ಲಿ ಏರ್ಪಡಿಸದಿರುವ ಕುರಿತು.**

ಶ್ರೀ ಶಿವಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಆಚರಿಸಿದ ಅಂಬೇಡ್ಕರ್ ಜಯಂತಿಗೆ ಸಿಂಡಿಕೇಟ್ ಸದಸ್ಯರನ್ನು ಆಹ್ವಾನಿಸಿಲ್ಲ. ವಿಶ್ವವಿದ್ಯಾಲಯದಲ್ಲಿ ಬಸವ ಜಯಂತಿ ಆಚರಿಸಿಲ್ಲ. ಕೆ.ಹೆಚ್. ಪಾಟೀಲ್ ಅಧ್ಯಯನ ಪೀಠದಿಂದ ಕಾರ್ಯಕ್ರಮಗಳನ್ನು ನಡೆಸುತ್ತಿಲ್ಲ. ಡಾ. ಬಾಬು ಜಗಜೀವನ್‌ರಾಂ ಅಧ್ಯಯನ ಕೇಂದ್ರದಲ್ಲಿ ಸಾಕಷ್ಟು ಅನುದಾನವಿದ್ದರೂ ಕಾರ್ಯಕ್ರಮಗಳು ಆಗುತ್ತಿಲ್ಲ. ಜಯಂತಿಗಳನ್ನು ಹಾಗೂ ಕಾರ್ಯಕ್ರಮಗಳನ್ನು ಆಚರಿಸದ ವಿಭಾಗ/ಅಧ್ಯಯನ ಕೇಂದ್ರ/ಅಧ್ಯಯನ ಪೀಠದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು. ಮುಂದುವರೆದು ಮಾತನಾಡಿದ ಅವರು, ವಿಶ್ವವಿದ್ಯಾಲಯವು ಸಿಂಡಿಕೇಟ್ ಸದಸ್ಯರನ್ನು ಕಡೆಗಣಿಸುತ್ತಿದ್ದು, ಸಿಂಡಿಕೇಟ್ ಸದಸ್ಯರ ವಿವರಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರದರ್ಶಿಸುತ್ತಿಲ್ಲ. ವಿಶ್ವವಿದ್ಯಾಲಯ ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಸಿಂಡಿಕೇಟ್ ಸದಸ್ಯರ ಹೆಸರು ಇರುವುದಿಲ್ಲ. ಕನಿಷ್ಠ ಎಲ್ಲಾ ಗೌರವಾನ್ವಿತ ಸಿಂಡಿಕೇಟ್ ಸದಸ್ಯರು ಎಂದಾದರೂ ನಮೂದಿಸಲು ತಿಳಿಸಿರಿ ಎಂದರು.

ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ, ಸಾಂಸ್ಕೃತಿಕ ನಾಯಕ ಬಸವಣ್ಣರವರ ಜಯಂತಿಯನ್ನು ಮಾಡಿಲ್ಲವೆಂದು ಸ್ಥಳೀಯರು ಪ್ರತಿಭಟನೆ ಮಾಡಿದಾಗ ಶೀಘ್ರವೇ ಏರ್ಪಡಿಸುವುದಾಗಿ ತಿಳಿಸಿದ್ದಾರೆ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಒಂದೇ ತತ್ವ ಸಾರಿದ್ದಾರೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ವಿಶ್ವವಿದ್ಯಾಲಯದಲ್ಲಿ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿದ್ದಾರೆ. ಆದುದರಿಂದ, ಎಲ್ಲರ ಜಯಂತಿಗಳನ್ನೂ ಆಚರಿಸಬೇಕು. ಒಬ್ಬರದ್ದನ್ನು ಅದ್ದೂರಿಯಾಗಿ ಆಚರಿಸಿ, ಇನ್ನೊಬ್ಬರದ್ದನ್ನು ಸರಳವಾಗಿ ಆಚರಿಸುತ್ತಿರುವ ಬಗ್ಗೆ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಬಸವಣ್ಣನವರು ವಿಶ್ವದಲ್ಲಿ ಆರ್ಥಿಕ ಸಮಾನತೆಯನ್ನು ಸಾರಿದವರು. ಅವರನ್ನು ಕಡೆಗಣಿಸುವುದು ಸರಿಯಲ್ಲ. ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರ ವಿರುದ್ಧ ಕ್ರಮ ಕೈಗೊಳ್ಳಿ ಎಂದರು. ಶ್ರೀ ಬಿ.ಎಸ್.ಶಶಿಧರ್ ರವರು ಮಾತನಾಡಿ, ಸಂಬಂಧಪಟ್ಟ ಪೀಠ/ವಿಭಾಗದವರು ಜಯಂತಿ ಮತ್ತು ಕಾರ್ಯಕ್ರಮಗಳನ್ನು ನಡೆಸಬೇಕು. ಅದು ಅವರ ಕರ್ತವ್ಯವಾಗಿದೆ. ಕಾರ್ಯಕ್ರಮ ನಡೆಸಿಲ್ಲವೆಂದರೆ ಅವರಿಗೆ ನೋಟೀಸ್ ನೀಡಿ ಮಾಹಿತಿ ಪಡೆದು, ಅವರ ವಿರುದ್ದ ಕ್ರಮ ಕೈಗೊಳ್ಳಬೇಕು. ಎಲ್ಲಾ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸುವ ಬದಲು ಸರಳವಾಗಿ ಆಚರಿಸಿ ಅವರ ತತ್ವ ಮತ್ತು ಬೋಧನೆಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಬೇಕು ಎಂದರು.

ಪ್ರೊ. ಜಗನ್ನಾಥ ಕೆ. ಡಾಂಗೆ ರವರು ಮಾತನಾಡಿ, ಪ್ರೊ. ಬಿ. ಕೃಷ್ಣಪ್ಪ ಅಧ್ಯಯನ ಕೇಂದ್ರ, ಡಾ. ಬಾಬು ಜಗಜೀವನ್‌ರಾಂ ಅಧ್ಯಯನ ಕೇಂದ್ರ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳಿಗೆ ಸರ್ಕಾರದಿಂದ ಅನುದಾನ ಬರುತ್ತದೆ. ಆದರೆ ಬಸವೇಶ್ವರ ಅಧ್ಯಯನ ಕೇಂದ್ರ ಸೇರಿದಂತೆ ಉಳಿದ ಪೀಠ/ ಅಧ್ಯಯನ ಕೇಂದ್ರಗಳಿಗೆ ಬಹಳ ವರ್ಷಗಳ ಹಿಂದೆಯೇ ಅತೀ ಕಡಿಮೆ ಹಣವನ್ನು ಠೇವಣಿ ಇಡಲಾಗಿದೆ. ಅದರ ಬಡ್ಡಿಯಿಂದ ಕಾರ್ಯಕ್ರಮ ನಡೆಸಲಾಗುತ್ತಿದೆ. ಬಸವ ಜಯಂತಿಯನ್ನು ಸಮಾಜಶಾಸ್ತ್ರ ವಿಭಾಗದವರು ನಡೆಸುತ್ತಾರೆ. ಈಗ ನ್ಯಾಕ್ ಭೇಟಿಯ ಪೂರ್ವಸಿದ್ಧತೆಯಲ್ಲಿ ನಿರತರಾಗಿರುವುದರಿಂದ ತಡವಾಗಿದೆ. ವಿವಿಧ ವಿಭಾಗಗಳ ಅಧ್ಯಾಪಕರು ಪೀಠ/ಅಧ್ಯಯನ ಕೇಂದ್ರಗಳ ಮುಖ್ಯಸ್ಥರಾಗಿದ್ದು, ಅವರು ತಮ್ಮ ಬೋಧನೆ ಮತ್ತು ಸಂಶೋಧನಾ ಚಟುವಟಿಕೆಗಳ ಜೊತೆಗೆ ಇದನ್ನು ಹೆಚ್ಚುವರಿಯಾಗಿ ನಿಭಾಯಿಸುತ್ತಾರೆ. ಇದು ಅವರಿಗೆ ಹೆಚ್ಚುವರಿ ಕೆಲಸವಾಗಿದೆ. ಅವರ ವಿರುದ್ಧ ಕ್ರಮ ಕೈಗೊಳ್ಳಿ ಎನ್ನುವುದು ಸರಿಯಲ್ಲ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಬುದ್ಧ, ಬಸವ ಮತ್ತು ಅಂಬೇಡ್ಕರ್ ರವರು ವಿಶ್ವನಾಯಕರು. ಅವರನ್ನು ಯಾವುದೇ ಜಾತಿ, ಮತಗಳಿಗೆ ಸೀಮಿತಗೊಳಿಸುವುದು ಬೇಡ. ವಿಶ್ವವಿದ್ಯಾಲಯದಲ್ಲಿ ಎಲ್ಲರ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಕಳೆದ ವರ್ಷ ಬಸವ ಜಯಂತಿ ಕಾರ್ಯಕ್ರಮಕ್ಕೆ ಲೇಖಕಿಯಾದ ಪ್ರೊ.ಎಂ.ಎಸ್.ಆಶಾದೇವಿಯವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿ ಅವರಿಂದ ಬಸವಣ್ಣನವರ ಬಗ್ಗೆ ಉಪನ್ಯಾಸ ಏರ್ಪಡಿಸಲಾಗಿತ್ತು. ಈ ವರ್ಷ ಕೂಡ ನಡೆಸಲಾಗುವುದು ಎಂದರು.

ಕುಲಸಚಿವರು ಮಾತನಾಡಿ, ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಬಸವ ಜಯಂತಿ ದಿನವೇ ಕಾರ್ಯಕ್ರಮವನ್ನು ಎಲ್ಲಾ ಜಯಂತಿಗಳಂತೆ ಸರಳವಾಗಿ ಆಚರಿಸಿದ್ದಾರೆ. ಆದರೆ, ಮುಷ್ಕರ ಮಾಡಿದವರು ಅದೇ ದಿನ ಆಚರಿಸಬೇಕೆಂದು ಆಗ್ರಹಿಸಿದರು. ಈ ಹಿನ್ನೆಲೆಯಲ್ಲಿ ಎಲ್ಲಾ ಜಯಂತಿಗಳನ್ನು ಅದೇ ದಿನ ಆಚರಿಸುವಂತೆ ಸುತ್ತೋಲೆ ಹೊರಡಿಸಲಾಗಿದೆ. ಇನ್ನು ಮುಂದೆ ಜಯಂತಿ ದಿನವೇ ಆಚರಿಸಲಾಗುವುದು ಎಂದರು.

**2025–ಸಿಂ–4.22.1(ಬಿ): 34ನೇ ವಾರ್ಷಿಕ ಘಟಿಕೋತ್ಸವದ ಆಯೋಜನೆ ಕುರಿತು.**

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವಕ್ಕೆ ನಿಖರವಾಗಿ ಎಷ್ಟು ಖರ್ಚಾಯಿತು ಎಂಬುದರ ಬಗ್ಗೆ ಈವರೆಗೂ ವಿವರ ನೀಡಿಲ್ಲ. ಬಿಲ್ಲುಗಳ ವಿವರಗಳೊಂದಿಗೆ ಸಭೆಗೆ ಮಂಡಿಸಬೇಕು. ಘಟಿಕೊತ್ಸವದ ವ್ಯವಸ್ಥೆಗಳಿಗೆ ಸ್ಥಳೀಯರಿಗೆ ಆದ್ಯತೆ ನೀಡುವಂತೆ ಕೋರಲಾಗಿತ್ತು. ಆದರೆ ಹೊರಗಿನವರಿಗೆ ನೀಡಲಾಗಿದೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಘಟಿಕೋತ್ಸವದ ನಿರ್ವಹಣೆ ಮಾಡಿ ಅನುಭವವುಳ್ಳ ಈವೆಂಟ್ ಮ್ಯಾನೇಜ್‌ಮೆಂಟ್‌ನವರಿಗೆ ನೀಡುವುದಾಗಿ ತಿಳಿಸಿದ್ದಿರಿ. ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಕಡಿಮೆ ವೆಚ್ಚದಲ್ಲಿ ಘಟಿಕೋತ್ಸವ ನಡೆಸಬಹುದಾಗಿತ್ತು. ಹಿಂದಿನ ವರ್ಷ ಕಡಿಮೆ ವೆಚ್ಚವಾಗಿತ್ತು. ಈ ಬಾರಿ ರೂ.40.00 ಲಕ್ಷಗಳಿಗಿಂತ ಹೆಚ್ಚು ಖರ್ಚಾಗಿದೆ. ಆದರೆ, ಆ ಮಟ್ಟಕ್ಕೆ ಕಾರ್ಯಕ್ರಮ ಆಗಿಲ್ಲ ಎಂದರು.

ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ರೂ.40.00 ಲಕ್ಷಗಳನ್ನು ಡ್ರಾ ಮಾಡಿಲ್ಲ. ಘಟಿಕೋತ್ಸವದ ಯಾವುದೇ ಕೆಲಸಕ್ಕೂ ವಿಶ್ವವಿದ್ಯಾಲಯವು ಟೆಂಡರ್ ಕರೆದಿಲ್ಲ. 4(ಜಿ) ವಿನಾಯಿತಿ ಇರುವ ಸರ್ಕಾರದ ಸಂಸ್ಥೆಗೆ 34ನೇ ಘಟಿಕೋತ್ಸವ ನಿರ್ವಹಣೆ ಮಾಡುವಂತೆ ಪತ್ರ ಬರೆದಿದ್ದೆವು. ಸರ್ಕಾರದವರು ಟೆಂಡರ್ ಮಾಡಿಕೊಂಡು ಒಂದು ವರ್ಷದ ಅವಧಿಗೆ ಈವೆಂಟ್ ಮ್ಯಾನೇಜ್‌ಮೆಂಟ್ ಏಜೆನ್ಸಿಯನ್ನು ಆಯ್ಕೆ ಮಾಡಿರುತ್ತಾರೆ. ನಾವು ಆದೇಶ ನೀಡಿದ ನಂತರ ಘಟಿಕೋತ್ಸವ ಕಾರ್ಯಕ್ರಮ ಏರ್ಪಡಿಸಿರುವ ಅನುಭವ ಇರುವ ಏಜನ್ಸಿಯನ್ನು ಅವರೇ ಆಯ್ಕೆ ಮಾಡಿಕೊಂಡು ಆದೇಶ ನೀಡುತ್ತಾರೆ. ವಿಶ್ವವಿದ್ಯಾಲಯದಿಂದ ನೇರವಾಗಿ ಸರ್ಕಾರದ ಸಂಸ್ಥೆಗೆ ಹಣ ಪಾವತಿಸಲಾಗಿದೆ. ರೂ.40.00 ಲಕ್ಷಗಳಲ್ಲಿ ನೈಜ ವೆಚ್ಚ ರೂ.33.5 ಲಕ್ಷಗಳಾಗಿದ್ದು, ರೂ.7.5ಲಕ್ಷ ಜಿ.ಎಸ್.ಟಿ. ಇದೆ. ಘಟಿಕೋತ್ಸದ ವ್ಯವಸ್ಥೆಗಳಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವಂತೆ ಈವೆಂಟ್ ಮ್ಯಾನೇಜ್‌ಮೆಂಟ್‌ನವರಿಗೆ ತಿಳಿಸಿದ್ದೆವು. ಫೋಟೋ, ವಿಡಿಯೋ, ಶಾಮಿಯಾನ, ಅಡಿಗೆ ಮುಂತಾದವರು ಸ್ಥಳೀಯರೇ ಇದ್ದರು. ಬೇರೆ ಕೆಲವು ವಿಶ್ವವಿದ್ಯಾಲಯಗಳಿಗೆ ಹೋಲಿಸಿದಲ್ಲಿ ನಮ್ಮದು ಕಡಿಮೆ ವೆಚ್ಚವಾಗಿದೆ, ಘಟಿಕೋತ್ಸವ ಕಾರ್ಯಕ್ರಮವನ್ನು ಬೇರೆ ವಿಶ್ವವಿದ್ಯಾಲಯಗಳಿಗಿಂತ ಉತ್ತಮವಾಗಿಯೇ ನಡೆಸಲಾಗಿದೆ. ಬಿಲ್ಲುಗಳು ಪೂರ್ಣಪ್ರಮಾಣದಲ್ಲಿ ಕ್ಲಿಯರ್ ಆದ ನಂತರ ಬಿಲ್ಲಿನ ವಿವರಗಳನ್ನು ಮುಂದಿನ ಸಭೆಗೆ ಒದಗಿಸಲಾಗುವುದು. ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವದ ನಿರ್ವಹಣೆಯನ್ನು ಈವೆಂಟ್ ಮ್ಯಾನೇಜ್‌ಮೆಂಟ್‌ಗೆ ನೀಡುವುದರ ಬದಲು ಸಿಂಡಿಕೇಟ್ ಸದಸ್ಯರು ತಿಳಿಸಿದಂತೆ ವಿಶ್ವವಿದ್ಯಾಲಯವೇ ಸ್ಥಳೀಯವಾಗಿ ನಿರ್ವಹಿಸುವುದು ಮತ್ತು ಇದನ್ನು ಸದಸ್ಯರಾದ ಶಿವಕುಮಾರ್‌ರವರ ನೇತೃತ್ವದಲ್ಲಿ ಹಾಗೂ ಶಿಫಾರಸ್ಸಿನಂತೆ ವಿವಿಧ ಸಮಿತಿಗಳನ್ನು ರಚಿಸಿ ಕ್ರಮ ಕೈಗೊಳ್ಳಬಹುದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಮಾನ್ಯ ಕುಲಾಧಿಪತಿಯವರು ರಾಜ್ಯದ ಬೇರೆ ವಿಶ್ವವಿದ್ಯಾಲಯಗಳ ಘಟಿಕೋತ್ಸವಕ್ಕೆ ತೆರಳಿದ ಸಂದರ್ಭದಲ್ಲಿ ನಮ್ಮ ವಿಶ್ವವಿದ್ಯಾಲಯದ ಘಟಿಕೋತ್ಸವ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದ್ದಾರೆ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಹರ್ಷ ವ್ಯಕ್ತಪಡಿಸಿದರು.

ಚರ್ಚೆಯ ನಂತರ, ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವದ ನಿರ್ವಹಣೆಯನ್ನು ಈವೆಂಟ್ ಮ್ಯಾನೇಜ್‌ಮೆಂಟ್‌ಗೆ ನೀಡುವುದರ ಬದಲು ಸಿಂಡಿಕೇಟ್ ಸದಸ್ಯರು ತಿಳಿಸಿದಂತೆ ವಿಶ್ವವಿದ್ಯಾಲಯವೇ ಸ್ಥಳೀಯವಾಗಿ ನಿರ್ವಹಿಸುವುದು ಮತ್ತು ಇದನ್ನು ಸದಸ್ಯರಾದ ಶ್ರೀ ಶಿವಕುಮಾರ್ ರವರ ನೇತೃತ್ವದಲ್ಲಿ ಹಾಗೂ ಶಿಫಾರಸ್ಸಿನಂತೆ ವಿವಿಧ ಸಮಿತಿಗಳನ್ನು ರಚಿಸಿ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಿತು.

**2025–ಸಿಂ–4.22.2: ಶ್ರೀ ಅರವಿಂದ ಹೆಚ್.ಜಿ.: ಟೆಂಡರ್ ಪರಿಶೀಲನಾ ಸಮಿತಿಗಳ ಸದಸ್ಯರನ್ನು ಪದೇ ಪದೇ ಬದಲಾಯಿಸುತ್ತಿರುವ ಕುರಿತು.**

ಶ್ರೀ ಅರವಿಂದ, ಹೆಚ್.ಜಿ. ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಇ–ಟೆಂಡರ್ ಕರೆಯಲು ಕಟ್ಟಡ ಸಮಿತಿ ಸಭೆಯಲ್ಲಿ ನಿರ್ಣಯವಾಗಿತ್ತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ.

ಕಟ್ಟಡ ಸಮಿತಿಯಲ್ಲಿರುವ ಸಿಂಡಿಕೇಟ್ ಸದಸ್ಯರೇ ಟೆಂಡರ್ ಪರಿಶೀಲನಾ ಸಮಿತಿಯಲ್ಲಿ ಕೂಡ ಸದಸ್ಯರಾಗಿರ ಬೇಕೆಂಬ ಉದ್ದೇಶದಿಂದ ಟೆಂಡರ್ ಪರಿಶೀಲನಾ ಸಮಿತಿಗೆ ನನ್ನನ್ನು ನೇಮಿಸಿದ್ದರು. ನಂತರ ನನಗೆ ಯಾವುದೇ ಮಾಹಿತಿ ನೀಡದೇ, ನನ್ನನ್ನು ಬದಲಿಸಿ ಬೇರೆಯವರನ್ನು ನೇಮಕ ಮಾಡುವ ಮೂಲಕ ನನಗೆ ಅವಮಾನ ಮಾಡಿದರು. ಮಾನವ ಸಂಪನ್ಮೂಲ ಹೊರಗುತ್ತಿಗೆಯ ಟೆಂಡರ್‌ಗೆ ಕೂಡ ಮಧ್ಯದಲ್ಲಿ ಹೆಚ್ಚುವರಿಯಾಗಿ ಶ್ರೀ ಕೆ.ಪಿ.ಶ್ರೀಪಾಲ್ ಮತ್ತು ಪ್ರೊ.ಎಸ್.ವಿ. ಕೃಷ್ಣಮೂರ್ತಿರವರನ್ನು ಸೇರ್ಪಡೆ ಮಾಡಿದರು. ಆದಾಗ್ಯೂ ಸಮಿತಿಯು ದೂರುಗಳು ಇರುವ M/s KSF-9 Corporate Service Pvt. Ltd., Bengaluru ಸಂಸ್ಥೆಯನ್ನು ಆಯ್ಕೆ ಮಾಡಿದೆ. ಕ್ಯಾಂಟೀನ್ ಟೆಂಡರ್ ಪರಿಶೀಲನಾ ಸಮಿತಿಗೆ ಕೂಡ ನೇಮಕ ಮಾಡಿದ್ದ ನನ್ನನ್ನು ಮತ್ತೊಮ್ಮೆ ಬದಲಾಯಿಸಲಾಯಿತು. ಏಕೆ ಹೀಗೆ ಅವಮಾನ ಮಾಡಲಾಗುತ್ತಿದೆ ಎಂದರು. ಶ್ರೀಮತಿ ಸಾಕಮ್ಮನವರು ಕೂಡ ಇದಕ್ಕೆ ಧ್ವನಿಗೂಡಿಸಿ, ವಿವಿಧ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡುವುದು ಮತ್ತು ಅವರನ್ನು ಬದಲಿಸುವುದು ಸರಿಯಲ್ಲ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಟೆಂಡರ್ ಪರಿಶೀಲನಾ ಸಮಿತಿಯ ಸದಸ್ಯರನ್ನು ಬದಲಿಸಿದ ಉದ್ದೇಶ ಎಲ್ಲಾ ಸಿಂಡಿಕೇಟ್ ಸದಸ್ಯರು ವಿವಿಧ ಸಮಿತಿಗಳಲ್ಲಿ ಇರಬೇಕೆನ್ನುವುದಾಗಿತ್ತು. ಶ್ರೀ ಅರವಿಂದ ರವರು 2-3 ಸಮಿತಿಗಳಲ್ಲಿ ಇದ್ದುದ್ದರಿಂದ ಬದಲಿಸಿ ಬೇರೆಯವರಿಗೆ ಅವಕಾಶ ನೀಡಲಾಗಿದೆ ಎಂದರು. ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ನಿಮ್ಮ ಉದ್ದೇಶ ಸರಿ ಇದೆ. ಆದರೆ ಟೆಂಡರ್ ಪರಿಶೀಲನಾ ಸಮಿತಿಗೆ ನೇಮಕ ಮಾಡುವ ಮುನ್ನವೇ ಪರಿಶೀಲಿಸಿ ನೇಮಕ ಮಾಡಬೇಕು. ಒಮ್ಮೆ ನೇಮಕ ಮಾಡಿ ಮಧ್ಯದಲ್ಲಿ ಬದಲಾಯಿಸುವುದು ಸರಿಯಲ್ಲ. ಇದರಿಂದ ಟೆಂಡರ್‌ನ ಸಮಗ್ರ ಪರಿಶೀಲನೆ ಸರಿಯಾಗುವುದಿಲ್ಲ ಎಂದರು.

**2025–ಸಿಂ–4.22.3: ಶ್ರೀ ಕೆ.ಪಿ. ಶ್ರೀಪಾಲ್**

**2025–ಸಿಂ–4.22.3(ಎ): ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ.**

ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ವಿಶ್ವವಿದ್ಯಾಲಯದ ಅಧ್ಯಾಪಕರು ಉಪಕುಲಸಚಿವ, ಹಣಕಾಸು ಅಧಿಕಾರಿ ಹೀಗೆ ವಿವಿಧ ಪ್ರಭಾರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಪಾಠಪ್ರವಚನ ಮತ್ತು ಸಂಶೋಧನಾ ಕಾರ್ಯಕ್ಕೆ ಹಿನ್ನೆಡೆಯಾಗುತ್ತಿದೆ. ಅವರುಗಳನ್ನು ಸಂಬಂಧಪಟ್ಟ ವಿಭಾಗಗಳಿಗೆ ಹಿಂದಿರುಗಿಸಿ. ಹಣಕಾಸು ಅಧಿಕಾರಿ ಹುದ್ದೆಗೆ ಸರ್ಕಾರದಿಂದ ನಿಯೋಜಿಸುವಂತೆ ಪ್ರಸ್ತಾವನೆ ಕಳುಹಿಸಬೇಕು ಎಂದರು.

ಕುಲಸಚಿವರು ಮಾತನಾಡಿ, ಉಪಕುಲಸಚಿವ ವೃಂದದಲ್ಲಿ ಸರ್ಕಾರದಿಂದ ಮಂಜೂರಾಗಿರುವ 10 ಹುದ್ದೆಗಳು ಇವೆ. ಇದರಲ್ಲಿ 2 ಹುದ್ದೆಗಳನ್ನು ಅಧ್ಯಾಪಕ ವೃಂದದಿಂದ ನಿಯೋಜನೆ ಮೇರೆಗೆ ಭರ್ತಿಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ತಮ್ಮ ದೈನಂದಿನ ಬೋಧನೆ ಮತ್ತು ಸಂಶೋಧನೆ ಕಾರ್ಯದ ಜೊತೆಗೆ ಉಪಕುಲಸಚಿವ ಹುದ್ದೆಯಲ್ಲಿ ಕೂಡ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಣಕಾಸು ಅಧಿಕಾರಿ ಹುದ್ದೆಗೆ ಅಧಿಕಾರಿಯನ್ನು ನಿಯೋಜಿಸುವಂತೆ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ. ಇನ್ನೊಂದು ನೆನಪೋಲೆ ಬರೆಯಲಾಗುವುದು. ಸರ್ಕಾರದಿಂದ ನಿಯೋಜಿಸುವವರೆಗೂ ಪ್ರಭಾರ ವ್ಯವಸ್ಥೆ ಮಾಡುವುದು ಅನಿವಾರ್ಯವಾಗಿದೆ ಎಂದರು.

**2025–ಸಿಂ–4.22.3(ಬಿ): ಹಾಸ್ಟೆಲ್‌ಗಳಿಗೆ ಸಮಯ ನಿಗದಿಗೊಳಿಸುವ ಕುರಿತು.**

ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ವಿಶ್ವವಿದ್ಯಾಲಯದ ಮಹಿಳಾ ಹಾಸ್ಟೆಲ್‌ಗಳಿಗೆ ಸಮಯ ನಿಗದಿ ಮಾಡಬೇಕು. ರಾತ್ರಿ 10.00 ಗಂಟೆಯವರೆಗೂ ವಿದ್ಯಾರ್ಥಿನಿಯರು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಹಾಸ್ಟೆಲ್‌ನಿಂದ ಹೊರಗೆ ತಿರುಗಾಡುವುದನ್ನು ಗಮನಿಸಲಾಗಿದೆ. ಸುರಕ್ಷತೆಯ ದೃಷ್ಟಿಯಿಂದ ಇದು ಒಳ್ಳೆಯದಲ್ಲ. ಈ ಬಗ್ಗೆ ಶಿಕ್ಷಕ ಸಲಹೆಗಾರರಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕು. ಹಾಗೆಯೇ ಪುರುಷರ ವಿದ್ಯಾರ್ಥಿನಿಲಯಕ್ಕೆ ಕೂಡ ಸಮಯ ನಿಗದಿ ಮಾಡಬೇಕು ಎಂದರು. ಶ್ರೀ ಶಶಿಧರ್ ಬಿ.ಎನ್. ಹಾಗೂ ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ, ಸಮಯ ನಿಗದಿಗೊಳಿಸಿ, ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಬೇಕು ಎಂದರು. ಶ್ರೀ ಅರವಿಂದ್ ರವರು ಶಿಕ್ಷಕ ಸಲಹೆಗಾರರು ಮತ್ತು ಮ್ಯಾನೇಜರ್‌ಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಮಹಿಳಾ ವಿದ್ಯಾರ್ಥಿನಿಲಯಕ್ಕೆ ರಾತ್ರಿ 7.30ರೊಳಗೆ ತೆರಳಬೇಕೆಂದು ಸಮಯ ನಿಗದಿಯಾಗಿದೆ. ಸದಸ್ಯರು ತಿಳಿಸಿರುವುದನ್ನು ಗಂಭೀರವಾಗಿ ಪರಿಗಣಿಸಿ, ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

**2025–ಸಿಂ–4.22.3(ಸಿ): ಶಿವಮೊಗ್ಗದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸಂಶೋಧನಾ ಕೇಂದ್ರ ನೀಡುವ ಬಗ್ಗೆ.**

ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ಸರ್ಕಾರದ ದಿನಾಂಕ:29–10–2014ರ ಪತ್ರದಲ್ಲಿ ಸರ್ಕಾರಿ ಕಾಲೇಜುಗಳಲ್ಲಿರುವ ಪಿಹೆಚ್.ಡಿ. ಪದವಿ ಹೊಂದಿರುವ ಅರ್ಹ ಪ್ರಾಧ್ಯಾಪಕರುಗಳಿಗೆ ಪಿಹೆಚ್.ಡಿ. ಗೈಡ್‌ಶಿಪ್ ನೀಡಲು ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ. ಆದುದರಿಂದ, ಶಿವಮೊಗ್ಗದ ಬಾಪೂಜಿ ನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವಂತೆ ಕೋರಿದರು. ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ ಭದ್ರಾವತಿಯ ಸರ್.ಎಂ.ವಿ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕೂಡ ಪಿಹೆಚ್.ಡಿ. ಪದವಿ ಪಡೆದಿರುವ ಅಧ್ಯಾಪಕರಿದ್ದು, ಅಲ್ಲಿಗೂ ಸಂಶೋಧನಾ ಕೇಂದ್ರ ನೀಡಿರಿ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಕಾಲೇಜಿನವರು ಅರ್ಜಿ ಸಲ್ಲಿಸಲಿ. ಯು.ಜಿ.ಸಿ. ಗೈಡ್‌ಲೈನ್ಸ್ ಮತ್ತು ಪಿಹೆಚ್.ಡಿ. ರೆಗ್ಯುಲೇಷನ್ ಪ್ರಕಾರ ಪರಿಶೀಲಿಸಿ ನಿಯಮಾನುಸಾರ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಕ್ರಮಕೈಗೊಳ್ಳಲಾಗುವುದು ಎಂದರು.

**2025–ಸಿಂ–4.22.3(ಡಿ): ವಾಹನ ಚಾಲಕರ ಬಗ್ಗೆ.**

ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ವಾಹನ ಚಾಲಕರ ಸಂಖ್ಯೆ ಕಡಿಮೆ ಇದ್ದು, ಪ್ರಸ್ತುತ ಹೊರಗುತ್ತಿಗೆಯ ಮೂಲಕ ಅಟೆಂಡರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಡ್ರೈವರ್ ಹುದ್ದೆಗೆ ಪರಿಗಣಿಸಬಹುದು ಎಂದು ಹೇಳುತ್ತಾ, ಶ್ರೀ ಪ್ರವೀಣ್ ಕುಮಾರ್ ಎಲ್. ಹೊರಗುತ್ತಿಗೆ ನೌಕರ ಇವರ ಅರ್ಜಿಯನ್ನು ಪರಿಗಣಿಸಲು ತಿಳಿಸಿ ಅರ್ಜಿಯನ್ನು ಕುಲಸಚಿವರಿಗೆ ಸಲ್ಲಿಸಿದರು.

ಕುಲಸಚಿವರು ಮಾತನಾಡಿ, ಕೆಲವು ಹೊರಗುತ್ತಿಗೆ ನೌಕರರು ಡ್ರೈವರ್ ಆಗಿ ಕರ್ತವ್ಯ ನಿರ್ವಹಿಸಲು ಆಸಕ್ತರಾಗಿ ಅರ್ಜಿ ಸಲ್ಲಿಸಿದ್ದು, ಪರಿಶೀಲಿಸಲಾಗುವುದು ಎಂದರು.

**2025–ಸಿಂ–4.22.4: ಶ್ರೀ ಶಶಿಧರ್. ಬಿ.ಎನ್.**

**2025–ಸಿಂ–4.22.4(ಎ): ಟೆಂಡರ್ ಪ್ರಕ್ರಿಯೆ ಕುರಿತು;**

ಸದಸ್ಯರಾದ ಶ್ರೀ ಶಶಿಧರ್ ಬಿ.ಎನ್. ರವರು ಮಾತನಾಡಿ, ಸಿಂಡಿಕೇಟ್‌ಗೆ ವಿಶ್ವವಿದ್ಯಾಲಯದಲ್ಲಿ ಕರೆದಿರುವ ಇ–ಟೆಂಡರ್‌ಗಳ ಮಾಹಿತಿ ಇಲ್ಲ. ಇ–ಟೆಂಡರ್ ಕರೆಯುವುದಕ್ಕೆ ಮುಂಚೆಯೇ ಪ್ರಸ್ತಾವನೆಯನ್ನು ಸಿಂಡಿಕೇಟ್‌ಗೆ ಮಂಡಿಸಿ ಅನುಮೋದನೆ ಪಡೆಯಬೇಕು ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಸಚಿವರು ಮಾತನಾಡಿ, ಕೆ.ಟಿ.ಪಿ.ಪಿ. ನಿಯಮದ ಪ್ರಕಾರ ರೂ.5.00 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಇ-ಟೆಂಡರ್ ಮಾಡಲಾಗುತ್ತದೆ. ಎಲ್ಲ ಟೆಂಡರ್ ಪರಿಶೀಲನಾ ಸಮಿತಿಗಳಲ್ಲಿ ಸಿಂಡಿಕೇಟ್ ಸದಸ್ಯರು ಇರುತ್ತಾರೆ. ಟೆಂಡರ್ ಅಂತಿಮಗೊಂಡ ನಂತರ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಲಾಗುತ್ತಿದೆ. ಇಂಜಿನಿಯರಿಂಗ್ ವಿಭಾಗದ ಎಲ್ಲಾ ಟೆಂಡರ್ ಬಗ್ಗೆ ಕಟ್ಟಡ ಸಮಿತಿ ಸಭೆಯ ನಡಾವಳಿಗಳನ್ನು ಹಿಂದಿನ ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಇನ್ನು ಮುಂದೆ ಎಲ್ಲಾ ಟೆಂಡರ್‌ಗಳ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲಾಗುವುದು. ತುರ್ತು ಇದ್ದಾಗ ವಿಶೇಷ ಸಿಂಡಿಕೇಟ್ ಸಭೆ ಕರೆದು ಅನುಮೋದನೆ ಪಡೆಯಲಾಗುವುದು ಎಂದರು.

**2025–ಸಿಂ–4.22.4(ಬಿ): ತಾಂತ್ರಿಕ ಸಿಬ್ಬಂದಿಗಳ ವೇತನ ಕುರಿತು.**

ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಲೈಬ್ರರಿ ಅಸಿಸ್ಟೆಂಟ್ ಮತ್ತು ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್‌ಗಳಿಗೆ ಸಕಾಲದಲ್ಲಿ ವೇತನ ಪಾವತಿಯಾಗದೇ ತೊಂದರೆಯಾಗುತ್ತಿದೆ. ಅವರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಪರಿಹರಿಸಿ ಎಂದರು.

ಕುಲಸಚಿವರು ಮಾತನಾಡಿ, ಲೈಬ್ರರಿ ಅಸಿಸ್ಟೆಂಟ್, ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಸೇರಿದಂತೆ ಕೆಲವು ಸಿಬ್ಬಂದಿಗಳ ಮೂಲವೇತನ ನಿಗದಿಗೊಳಿಸಿರುವುದಕ್ಕೆ ವಿನಿಯಮ ರಚಿಸಿಕೊಂಡಿಲ್ಲವೆಂದು ಹಿಂದಿನಿಂದಲೂ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಿಂದ ಪತ್ರಗಳು ಬರುತ್ತಿವೆ. ಈ ಕುರಿತು ವಿಶ್ವವಿದ್ಯಾಲಯದಿಂದ ಮಾಹಿತಿ ನೀಡಲಾಗುತ್ತಿದೆ. ಈ ಬಾರಿ ಜಂಟಿ ನಿರ್ದೇಶಕರು ಬದಲಾಗಿದ್ದು, ಮತ್ತೊಮ್ಮೆ ಆಕ್ಷೇಪಣೆಯೊಂದಿಗೆ ಅವರುಗಳ ವೇತನದ ಬಿಲ್ಲನ್ನು ಹಿಂದಿರುಗಿಸಿದ್ದಾರೆ. ಅವರಿಗೆ ಮಾಹಿತಿ ನೀಡಿದೆ ಎಂದರು.

**2025–ಸಿಂ–4.22.5: ಶ್ರೀ ಮುಸಾವೀರ್ ಬಾಷಾ**

**2025–ಸಿಂ–4.22.5(ಎ): ಕಾಮಗಾರಿಗಳ ಗುಣಮಟ್ಟ ಪರಿಶೀಲನೆ ಕುರಿತು.**

ಸದಸ್ಯರಾದ ಮುಸಾವೀರ್ ಬಾಷಾ. ರವರು ಮಾತನಾಡಿ, ಇಂಜಿನಿಯರಿಂಗ್ ವಿಭಾಗದ ಕಾಮಗಾರಿ ಟೆಂಡರ್‌ಗಳಲ್ಲಿ ಕೆಲವರು ಶೇ.27ಕ್ಕಿಂತ ಕಡಿಮೆ ಹಾಕಿದ್ದಾರೆ. ಇಷ್ಟು ಕಡಿಮೆಯಾದಲ್ಲಿ ಗುಣಮಟ್ಟದ ಕೆಲಸ ಆಗುವುದಿಲ್ಲ. ಕಾಮಗಾರಿಗಳು ಮುಗಿದ ನಂತರ Third Party Inspection ಮಾಡಿಸಿ ವರದಿ ಪಡೆದು ನಂತರವೇ ಬಿಲ್ ಪಾವತಿಸಬೇಕು. Third Party Inspection ಸಮಿತಿಗೆ ಮೂವರು ಸಿಂಡಿಕೇಟ್ ಸದಸ್ಯರನ್ನು ನೇಮಿಸಬೇಕು ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಶ್ರೀ ಶಿವಕುಮಾರ್ ಹಂಪಾಳಿರವರು ತುಂಬಾ Strict ಮಾಡುವುದರಿಂದ ಗುತ್ತಿಗೆದಾರರು ವಿಶ್ವವಿದ್ಯಾಲಯಕ್ಕೆ ಬರುತ್ತಿಲ್ಲ ಎಂಬ ಆಪಾದನೆ ಇದೆ. ಇದರಿಂದ ಕೆಲಸ ಕಾರ್ಯಗಳು ಸಕಾಲದಲ್ಲಿ ಆಗುವುದಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಹಂಪಾಳಿರವರು ಕಾಮಗಾರಿಗಳ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಸಾರ್ವಜನಿಕ ಹಣದಿಂದ ಆಗುವ ಕೆಲಸಗಳು ಕೆಲವು ವರ್ಷಗಳ ಕಾಲ ಬಾಳಿಕೆ ಬರಬೇಕು. ಆದಾಗ್ಯೂ ಕೆಲವು conditions ಗಳಲ್ಲಿ ಸ್ವಲ್ಪ ಮಟ್ಟಿನ relax ಮಾಡಿ ಗುಣಮಟ್ಟ ಕಾಪಾಡುವಂತೆ ತಿಳಿಸಲಾಗಿದೆ ಎಂದರು. ಶ್ರೀ ಶಶಿಧರ್ ಬಿ.ಎನ್. ಮತ್ತು ಶ್ರೀ ಶಾಂತಕುಮಾರ್ ರವರು ಮಾತನಾಡಿ, ರೂ.5.00 ಲಕ್ಷಗಳಿಗಿಂತ ಹೆಚ್ಚಿನ ಮೊಬಲಗಿನ ಟೆಂಡರ್ ಮಾಡಿರುವ ಕಾಮಗಾರಿಗಳು ಹಾಗೂ ಸದರಿ ಟೆಂಡರ್ ಸಮಿತಿಗಳಲ್ಲಿ ಯಾರ್‍ಯಾರು ಸದಸ್ಯರಿದ್ದಾರೆ ಎಂಬ ಮಾಹಿತಿಯನ್ನು ಮುಂದಿನ ಸಿಂಡಿಕೇಟ್‌ಗೆ ಒದಗಿಸುವಂತೆ ತಿಳಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಸಚಿವರು ಮಾತನಾಡಿ, ಕಾಮಗಾರಿಗಳ ಪರಿಶೀಲನೆಗೆ ರಚಿಸುವ Third Party Inspection ಸಮಿತಿಯಲ್ಲಿ ಆಯಾ ಕ್ಷೇತದಲ್ಲಿನ ಪರಿಣಿತರು ಇರಬೇಕು. ಅವರು ಕಾಮಗಾರಿಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಗುಣಮಟ್ಟದಿಂದ ಕೂಡಿರುವುದಾಗಿ ವರದಿ ನೀಡಬೇಕಾಗುತ್ತದೆ. ಆದುದರಿಂದ ಸದರಿ ಸಮಿತಿಯಲ್ಲಿ ತಜ್ಞ ಇಂಜಿನಿಯರ್‌ಗಳು ಇರಬೇಕಾಗುತ್ತದೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ ಇಂಜಿನಿಯರ್‌ಗಳ ಜೊತೆಗೆ ಸಿಂಡಿಕೇಟ್ ಸದಸ್ಯರನ್ನು ಕೂಡ ನೇಮಕ ಮಾಡಿ ಎಂದರು.

ಚರ್ಚೆಯ ನಂತರ ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ ರಚಿಸುವ Third Party Inspection ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರಾದ ಶ್ರೀ ಲಕ್ಷ್ಮಿಕಾಂತ ಚಿಮನೂರ್ ಮತ್ತು ಶ್ರೀ ಮುಸಾವೀರ್ ಬಾಷಾ ಎಂ. ಇವರನ್ನು ನೇಮಕ ಮಾಡಲು ನಿರ್ಣಯಿಸಲಾಯಿತು.

**2025–ಸಿಂ–4.22.5(ಬಿ): ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಎಂ.ಎ. ಇತಿಹಾಸ ಕೋರ್ಸ್‌ನ್ನು ಆರಂಭಿಸುವ ಕುರಿತು.**

ಸಹ್ಯಾದ್ರಿ ಕಾಲೇಜಿನ ಇತಿಹಾಸ ಅಧ್ಯಯನ ವಿಭಾಗಲ್ಲಿ ಮೂವರು ಖಾಯಂ ಅಧ್ಯಾಪಕರಿದ್ದು, ಎಂ.ಎ. ಇತಿಹಾಸ ಅಧ್ಯಯನ ವಿಭಾಗವನ್ನು ಆರಂಭಿಸುವಂತೆ ಕೋರಿದರು. ಡಾ. ಜಿ. ಮಧು ರವರು ಕೂಡ ಧ್ವನಿಗೂಡಿಸಿದರು.

ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಯವರು ತಿಳಿಸಿದರು.

**2025–ಸಿಂ–4.22.5(ಸಿ): ಸಿಂಡಿಕೇಟ್ ಸದಸ್ಯರಿಗೆ ಕಛೇರಿ ಒದಗಿಸುವ ಬಗ್ಗೆ.**

ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯಕ್ಕೆ ಬಂದಾಗ ಕುಳಿತು ಚರ್ಚಿಸಲು ಒಂದು ಕಛೇರಿಯ ಅಗತ್ಯವಿದ್ದು, ಒಂದು ಕೊಠಡಿ/ ಕಛೇರಿ ಒದಗಿಸುವಂತೆ ಶ್ರೀ ಮುಸಾವೀರ್ ಬಾಷಾ ರವರು ಕೋರಿದರು. ಬಹಳಷ್ಟು ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಈ ಬಗ್ಗೆ ಪರಿಶೀಲಿಸಿ ಸಿಂಡಿಕೇಟ್ ಸದಸ್ಯರಿಗೆ ಕಛೇರಿಯ ವ್ಯವಸ್ಥೆ ಮಾಡುವುದಾಗಿ ಕುಲಸಚಿವರು ತಿಳಿಸಿದರು.

**2025–ಸಿಂ–4.22.6: ಕುಲಸಚಿವರು (ಮೌಲ್ಯಮಾಪನ) : ಡಿಜಿಟಲ್ ಮೌಲ್ಯಮಾಪನ ಕುರಿತು.**

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸುವ ಅಧ್ಯಾಪಕರಿಗೆ ದಿನವೊಂದಕ್ಕೆ ದಿನಭತ್ಯೆ ರೂ.1200/–ಗಳು/ಲೋಕಲ್ ಕನ್ವೇಯನ್ಸ್ (ಸ್ಥಳೀಯ ಭತ್ಯೆ) ರೂ.800/– ಗಳನ್ನು ಪಾವತಿಸಲಾಗುತ್ತಿದೆ. ಪ್ರಸ್ತುತ ವಿಶ್ವವಿದ್ಯಾಲಯವು ಡಿಜಿಟಲ್ ಮೌಲ್ಯಮಾಪನ ಪದ್ಧತಿಯನ್ನು ಜಾರಿಗೊಳಿಸಿದ್ದು, ಅಧ್ಯಾಪಕರು ಕಾರ್ಯನಿರ್ವಹಿಸುವ ಸ್ಥಳದಲ್ಲಿಯೇ ಪ್ರಯಾಣಭತ್ಯೆ/ ದಿನಭತ್ಯೆ ರಹಿತವಾಗಿ ದಿನವೊಂದಕ್ಕೆ ರೂ.500/–ಗಳ ಉಪಸ್ಥಿತಿ ಭತ್ಯೆಯೊಂದಿಗೆ ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ಅವರಿಗೆ ಅಕ್ಸಸ್ ನೀಡಲು ಸಭೆಯ ಅನುಮತಿಗಾಗಿ ಮಂಡಿಸಿದೆ ಎಂದರು.

ಡಾ. ಶೈಲಜಾ ಎಸ್. ಹೊಸಳ್ಳೇರ ರವರು ಮಾತನಾಡಿ, ಸರ್ಕಾರವು ಅತಿಥಿ ಉಪನ್ಯಾಸಕರಿಗೆ 5 ದಿನಗಳ ಕಾಲ ಮಾತ್ರ ಪರೀಕ್ಷಾ ಕಾರ್ಯ ನಿರ್ವಹಿಸಲು ಅವಕಾಶ ನೀಡಿದೆ. ಆದರೆ, ಅವರು ಮೌಲ್ಯಮಾಪನ ಕೇಂದ್ರಕ್ಕೆ ತೆರಳಿದಾಗ ಸರ್ವರ್ ಇಲ್ಲ ಎಂಬ ಕಾರಣದಿಂದ ಮೌಲ್ಯಮಾಪನ ವಿಳಂಬವಾಗುತ್ತಿದೆ ಎಂದು ತಿಳಿಸುತ್ತಿದ್ದಾರೆ. ಶ್ರೀ ಉಲ್ಲಾಸ್ ಜಿ.ಇ. ರವರು ಮಾತನಾಡಿ ಚಿಕ್ಕಮಗಳೂರಿನ ಮೌಲ್ಯಮಾಪನ ಕೇಂದ್ರದಲ್ಲಿ ಡಿಜಿಟಲ್ ಮೌಲ್ಯಮಾಪನಕ್ಕೆ ಸರ್ವರ್‌ನಿಂದ ಯಾವುದೇ ಅಡಚಣೆಯಾಗುತ್ತಿಲ್ಲ ಎಂದರು. ಡಾ. ಜಿ. ಮಧು ರವರು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಮಾತನಾಡಿ 4–5 ಗಂಟೆಗಳ ನಿರಂತ ಮೌಲ್ಯಮಾಪನದಿಂದ ಅಧ್ಯಾಪಕರು ಸುಸ್ತಾಗುತ್ತಾರೆ. Display ದೊಡ್ಡದು ಮಾಡಿ ಎಂದರು. ಡಾ. ಅರವಿಂದ, ಕೆ.ಎಲ್. ರವರು ಮಾತನಾಡಿ, ಉಪಸ್ಥಿತ ಭತ್ಯೆಯನ್ನು ರೂ.500/–ರ ಬದಲಿಗೆ ರೂ.800/– ಉಳಿಸಿರಿ ಎಂದ ಅವರು Digital Valuation ನಿಂದ ನೇರವಾಗಿ U.U.C.M.S ನಲ್ಲಿ ಅಂಕಗಳು ಅಪ್‌ಲೋಡ್ ಆಗುವಂತೆ ಮಾಡಿದರೆ ಅನುಕೂಲವಾಗುತ್ತದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಿ ticket raise ಮಾಡಿದ್ದೇವೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, Digital Valuation ನ್ನು Remote Access ಮಾಡಿ ಮನೆಯಿಂದ ಕೂಡ ಮೌಲ್ಯಮಾಪನ ಮಾಡುವ ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಯೋಜಿಸಲಾಗುತ್ತಿದೆ ಎಂದರು.

2025–ಸಿಂ–4.22.7: **ಡಾ.ಜಿ. ಮಧು: ಬಿ.ಇಡಿ. ಪರೀಕ್ಷಾ ಮಂಡಳಿ ಕುರಿತು.**

ಡಾ.ಜಿ. ಮಧುರವರು ಮಾತನಾಡಿ, ಅನುದಾನರಹಿತ ಬಿ.ಇಡಿ. ಕಾಲೇಜಿನವರಿಗೆ ಪರೀಕ್ಷಾ ಮಂಡಳಿಯ ಅಧ್ಯಕ್ಷ ಸ್ಥಾನ ನೀಡುತ್ತಿಲ್ಲ. ತಾರತಮ್ಯ ಮಾಡುತ್ತಿದ್ದು, ಅನ್ಯಾಯ ಎಸಗಲಾಗುತ್ತಿದೆ. ಆದುದರಿಂದ ಇತ್ತೀಚೆಗೆ ರಚಿಸಿರುವ ಬಿ.ಇಡಿ. ಪರೀಕ್ಷಾ ಮಂಡಳಿಯನ್ನು ಪುನರ್‌ರಚಿಸಿ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಬಿ.ಓ.ಎ.ಇ. ಸಭೆಯಲ್ಲಿ ಮಾನ್ಯ ಕುಲಪತಿಯವರು ಪರೀಕ್ಷಾ ಕಾರ್ಯಗಳಲ್ಲಿ ಎಲ್ಲಾ ಅಧ್ಯಾಪಕರು ಭಾಗವಹಿಸುತ್ತಿದ್ದು, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಎಂದು ತಾರತಮ್ಯ ಮಾಡುವಂತಿಲ್ಲ. ಎಲ್ಲರನ್ನೂ ಒಂದೇ ರೀತಿ ಕಂಡು ಸಮಾನಾವಕಾಶ ನೀಡುವಂತೆ ತಿಳಿಸಿದ್ದಾರೆ. ಅವರಂತೆ ನೀಡಲಾಗುತ್ತಿದೆ. ಬಿ.ಇಡಿ. ಕಾಲೇಜಿನವರ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.

ಕುಲಸಚಿವರು ಮಾತನಾಡಿ, ಪರೀಕ್ಷಾ ಕಾರ್ಯಗಳಲ್ಲಿ ಎಲ್ಲರಿಗೂ ಅವಕಾಶ ನೀಡಬೇಕು. ಈ ಬಗ್ಗೆ ಪರಿಶೀಲಿಸಲಾಗುವುದು ಹಾಗೂ ಮುಂದೆ ನೀಡಲಾಗುವುದು ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

ಸಹಿ/–
**ಕುಲಪತಿಗಳು**